
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | January 2019 | Monthly




# ಸಂಭ್ರಮದ ಗಣರಾಜ್ಯೋತ್ಸವ

A Journal of Karnataka State Secondary Teachers' Association

# ಸಂಪಾದಕೀಯ

## ಸಂಕಲ್ಪ ದಿವಸ

ನಮಗೆಲ್ಲರಿಗೂ ತಿಳಿದಿರುವಂತೆ ಸ್ವಾಮಿ ವಿವೇಕಾನಂದರ ಜಯಂತಿ ಮತ್ತು ಸುಭಾಷ್‌ಚಂದ್ರ ಭೋಸ್‌ರ ಜಯಂತಿಯವರೆಗೆ ನಾವೆಲ್ಲರೂ **"ಸಂಕಲ್ಪ ದಿನಾಚರಣೆ"** (ಕರ್ತವ್ಯ ಬೋಧ ದಿವಸ 12.01–23.01) ಆಚರಿಸುತ್ತೇವೆ.

ಕರ್ತವ್ಯ ಬೋಧ ದಿವಸವನ್ನು ಆಚರಿಸುವಾಗ ನಾವೆಲ್ಲರೂ ಮಾಡುವ ಸಂಕಲ್ಪ ಈ ರೀತಿಯಾಗಿದೆ. **"ಶಿಕ್ಷಕ ವೃತ್ತಿಯು ಶ್ರೇಷ್ಠವಾದ ವೃತ್ತಿ"ಯೆಂದು ಪ್ರಜ್ಞಾಪೂರ್ವಕವಾಗಿ ತಿಳಿದೇ ನಾನು ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ. ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ ಕಾರ್ಯತತ್ಪರನಾಗಿ, ನನ್ನ ಸ್ವಂತ ಜೀವನದ ಆದರ್ಶದ ಮೂಲಕ, ನನ್ನ ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಮೂಡಿಸಿ ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ನನ್ನ ಹೊಣೆಗಾರಿಕೆಯನ್ನು ನಾನು ಕಾಯಾ, ವಾಚಾ, ಮನಸಾ ನಿರ್ವಹಿಸಲು ವಚನ ಬದ್ಧನಾಗಿದ್ದೇನೆ.**

ನಮಗೆಲ್ಲರಿಗೂ ಈ ಸಂಕಲ್ಪವನ್ನು ಮಾಡುವಾಗ ಒಂದೆರೆಡು ಪ್ರಶ್ನೆಗಳು ಮೂಡುವುದು ಸಹಜ. ಅವು ಏನೆಂದರೆ, ಹಾಗಾದರೆ ನಾನು ನನ್ನ ಕಾಯಕವನ್ನು ಕಾಯಾ, ವಾಚಾ, ಮನಸಾ ನಿರ್ವಹಿಸುತ್ತಿರಲಿಲ್ಲವೇ? ವರ್ಷಕೊಮ್ಮೆ ಈ ಸಂಕಲ್ಪವನ್ನು ನಾನು ಮಾಡುವ ಅವಶ್ಯಕತೆಯೇನು? ಈ ಸಂಕಲ್ಪವನ್ನು ಮಾಡಿದರೆ ಮಾತ್ರವೇ ನಾನು ನನ್ನ ಕರ್ತವ್ಯವನ್ನು ಕಾಯಾ, ವಾಚಾ, ಮನಸಾ ನಿರ್ವಹಿಸುತ್ತೇನೇಯೇ?

ಗುರು ಅಥವಾ ಶಿಕ್ಷಕ ವೃತ್ತಿಯನ್ನು ನಾವು ಅವಕಾಶದಿಂದಲೋ (chance) ಅಥವಾ ಆಯ್ಕೆಯಿಂದಲೋ (choice) ಸ್ವೀಕರಿಸಿದಾಗಲೇ ಸಂಕಲ್ಪ ಮಾಡಬೇಕು ಮತ್ತು ಮಾಡಿರುತ್ತೇವೆ. ಆದರೆ ನಾವೆಲ್ಲರೂ ಇಂದು ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳಲೇಬೇಕಾದ ಒಂದು ಅಂಶವೇನೆಂದರೆ ಪ್ರಾಚೀನ ಕಾಲದ ಆಚಾರ್ಯರಿಗೂ, ಮಧ್ಯಕಾಲದ ಗುರುಗಳಿಗೂ, ನವಯುಗದ ಶಿಕ್ಷಕರಿಗೂ ಬಹಳ ವ್ಯತ್ಯಾಸವಿದೆಯೆಂದು. ಕಾಲಚಕ್ರವೆಂದೂ ಹಿಂದೆ ಸರಿಯದು. ಆದರೆ ನಮ್ಮ-ನಿಮ್ಮೆಲ್ಲರ ಸ್ಥಾನಮಾನದ ವಿಷಯದಲ್ಲಿ ಕಾಲಚಕ್ರವನ್ನು ಹಿಂದೆಳೆಯಬೇಕಾದುದು ಅತ್ಯಂತ ಅವಶ್ಯಕ ಮತ್ತು ಅನಿವಾರ್ಯ. ನಾವೆಲ್ಲಾ ಈಗ ಶಿಕ್ಷಕರಿಂದ ಗುರುಗಳಾಗಿ ನಂತರ ಆಚಾರ್ಯರಾಗಬೇಕಾದ ಅನಿವಾರ್ಯತೆಯಿರುವುದರಿಂದ ಕೇವಲ ವಿವೇಕಾನಂದರ ಜಯಂತಿ ಮತ್ತು ಸುಭಾಷ್‌ಚಂದ್ರಭೋಸರ ಜನ್ಮದಿನದ ಮಧ್ಯದ ಅವಧಿಯಲ್ಲಿ ಸಂಕಲ್ಪ ಮಾಡದೇ ಪ್ರತಿನಿತ್ಯ ಸಂಕಲ್ಪ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ನಮ್ಮ ನಿಮ್ಮೆಲ್ಲರದು.

ಸಂಕಲ್ಪದಲ್ಲಿರುವ ವಾಕ್ಯಗಳನ್ನು ನಾವು ಗಮನಿಸಬೇಕು. **"ಶಿಕ್ಷಕ ವೃತ್ತಿಯು ಶ್ರೇಷ್ಠವಾದ ವೃತ್ತಿ"ಯೆಂದು ಪ್ರಜ್ಞಾಪೂರ್ವಕವಾಗಿ ತಿಳಿದೇ ನಾನು ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ**. ಪರಮಪವಿತ್ರವಾದ ಜೀವನವನ್ನು ರೂಪಿಸುವ ಶಿಕ್ಷಕವೃತ್ತಿಯನ್ನು ಆಯ್ಕೆ (chance)ಯಾಗಿ ಸ್ವೀಕರಿಸಿದಾಗ ಮಾತ್ರ ಪ್ರಜ್ಞಾಪೂರ್ವಕವಾಗಿ ಈ ವೃತ್ತಿಯ ಮಹತ್ವವನ್ನು ಅರಿತು ಸ್ವೀಕರಿಸುತ್ತೇವೆ. ಅವಕಾಶ (choice)ವಾಗಿ ಸ್ವೀಕರಿಸಿದಾಗ ವೃತ್ತಿಯನ್ನು ಸ್ವೀಕರಿಸಿದ ನಂತರವೇ ಪರಮಪವಿತ್ರತೆಯನ್ನು ಅರಿತು ಸಂಕಲ್ಪ ಮಾಡಬೇಕಾಗುತ್ತದೆ.

**ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ ಕಾರ್ಯತತ್ಪರನಾಗಿ** ವೃತ್ತಿಗೆ ಸೇರಿಕೊಂಡೆನೆಂದರೆ ಆಯಿತು ಎಲ್ಲಾ ನೈಪುಣ್ಯವಿರುತ್ತದೆಯೆಂದೆ ನಮ್ಮ ಭಾವನೆಯಾಗಿರುತ್ತದೆ. ಆದರೆ ವೃತ್ತಿಯಲ್ಲಿ ನೈಪುಣ್ಯ ಗಳಿಸಲು ಪ್ರತಿದಿನ ತತ್ಪರರಾಗಿದ್ದರೆ ಮಾತ್ರ ನಾವು ವೃತ್ತಿಯಲ್ಲಿ ಯಶಸ್ಸು ಗಳಿಸಲು ಸಾಧ್ಯ.

**ನನ್ನ ಸ್ವಂತ ಜೀವನದ ಆದರ್ಶದ ಮೂಲಕ ನನ್ನ ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಮೂಡಿಸಿ** – ಶಿಕ್ಷಕರ ಜೀವನ ಆದರ್ಶವಾಗಿದ್ದಾಗ ಮಾತ್ರ ಅವರು ಗುರುವಾಗಿ ಆಚಾರ್ಯರಾಗಲು ಸಾಧ್ಯ. ನಡೆನುಡಿಯಲ್ಲಿ ಸಾಮರಸ್ಯವಿದ್ದರೆ ಮಾತ್ರ ಆದರ್ಶರಾಗಲು ಸಾಧ್ಯ. ನಾವು ಆದರ್ಶರಾಗಿದ್ದು ವಿದ್ಯಾರ್ಥಿಗಳಲ್ಲಿ ಸದ್ಗುಣಗಳನ್ನು ಬೆಳೆಸಬೇಕು.

**ಉತ್ತಮ ಪ್ರಜೆಗಳನ್ನಾಗಿ ರೂಪಿಸುವ** – ಶಿಕ್ಷಣದ ಕೊನೆಯ ಗುರಿಯೇ ಉತ್ತಮ ಪ್ರಜೆಗಳ ನಿರ್ಮಾಣ. ಈ ಗುರಿ ನೆರವೇರಿದಾಗ ಮಾತ್ರ ಶಿಕ್ಷಕ ವೃತ್ತಿ ಪರಮಪವಿತ್ರವೆಂದೆನಿಸಿಕೊಳ್ಳುತ್ತದೆ.

ಶಿಕ್ಷಕ ತನ್ನ ಜೀವನವನ್ನು ಆದರ್ಶವಾಗಿ ಮಾಡಿಕೊಂಡು ಉತ್ತಮ ಪ್ರಜೆಯ ನಿರ್ಮಾಣ ಮಾಡಲಿಕ್ಕಾಗಿಯೇ ಈ ಸಂಕಲ್ಪದ ಅವಶ್ಯಕತೆಯಿದೆ. **ಬನ್ನಿ ಸಂಕಲ್ಪವನ್ನು ಸಾಕಾರಗೊಳಿಸೋಣ.**

ಸಂಪಾದಕ

# ಸೂಕ್ತಿ



ಊರ್ಧ್ವ ಬಾಹು ವಿರೌಮ್ಯೇಷಾಂ
ನಚಕಶ್ಚಿತ್ ಶೃಣೋತಿಮೇ॥
ಧರ್ಮಾದರ್ಥಶ್ಚಕಾಮಶ್ಚ
ಸ ಕಿಮರ್ಥಂ ನ ಸೇವ್ಯತೇ? ॥

ಎರಡೂ ಕೈಯೆತ್ತಿ ನಾನು ಘೋಷಿಸುತ್ತಿದ್ದರೂ
ನೀವೇಕೆ ಕೇಳುತ್ತಿಲ್ಲ? ಅರ್ಥ ಕಾಮಗಳನ್ನು
ಧರ್ಮಾಧಾರಿತವಾಗಿ ಏಕೆ ಸೇವಿಸುತ್ತಿಲ್ಲ?

- ಮಹರ್ಷಿ ವೇದವ್ಯಾಸ

# ಪರಿವಿಡಿ


- ಸಂಕ್ರಾಂತಿಯ ಮಹತ್ವ 3
- ಸಮರ್ಥ ಭಾರತ 4
- ದಿಟ್ಟ, ನೇರ ನಿರಂತರ, ನಿಸ್ವಾರ್ಥ, ವಿಶೇಷ ವ್ಯಕ್ತಿತ್ವ 5
- ನೇತಾಜಿ ಯುವ ಪೀಳಿಗೆಗೆ ಆದರ್ಶ 6
- ಗಣರಾಜ್ಯದಿನ– ಒಂದು ಚಿಂತನೆ 7
- 'ಚಿತ್ತಗಾಂಗ್'ನಲ್ಲೊಂದು ಸ್ವಾತಂತ್ರ್ಯ 'ಸೂರ್ಯ'ನ ಉದಯ 8
- ರಾಜಸ್ತಾನದ ಉದಯಪುರದಲ್ಲಿ ವಿಚಾರವರ್ಗ 10
- ಚಿತ್ರಸುದ್ದಿ 11
- ಚಿತ್ರಸುದ್ದಿ 12

# ಸಂಕ್ರಾಂತಿಯ ಮಹತ್ವ

ಶ್ರೀಮತಿ ವಿಜಯಾ ನಾಗರಾಜ್
ಬೆಂಗಳೂರು

ಸೂರ್ಯನು ಭೂಲೋಕದ ಪ್ರತ್ಯಕ್ಷ ದೇವರು. ಈತನನ್ನು ಜಾತಿ, ಮತ ಭೇದವಿಲ್ಲದೆ ಎಲ್ಲಾ ಜನರೂ ಆರಾಧಿಸುತ್ತಾರೆ. ಈ ಸೂರ್ಯ ನಮಗೆ ಬೆಳಕನ್ನು ನೀಡುವುದಲ್ಲದೆ ಬದುಕನ್ನೂ ನೀಡುವವನು. ಹಾಗೂ ಈ ಜಗತ್ತಿನ ಅಂಧಕಾರವನ್ನು ಹೋಗಲಾಡಿಸುವವನು. ಈತನು ಜ್ಞಾನದ ಸಂಕೇತವಾಗಿದ್ದಾನೆ. ಸೂರ್ಯ ಇಲ್ಲದಿದ್ದರೆ ಜಗತ್ತಿನ ಎಲ್ಲಾ ಚಟುವಟಿಕೆಗಳು ನಿಂತು ಹೋಗುತ್ತವೆ.

ಒಂದು ವರ್ಷದಲ್ಲಿ 12 ಮಾಸಗಳು. ಅವುಗಳನ್ನು ಉತ್ತರಾಯಣ, ದಕ್ಷಿಣಾಯನ ಎಂದು ಎರಡು ಭಾಗ ಮಾಡಲಾಗಿದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವನ್ನು 'ಸಂಕ್ರಾಂತಿ' ಎಂದು ಕರೆಯುತ್ತೇವೆ. ಸೂರ್ಯ ಒಂದು ರಾಶಿಯಲ್ಲಿ ಒಂದು ತಿಂಗಳ ಕಾಲ ಇರುತ್ತಾನೆ. ಹಾಗೆ ಸೂರ್ಯ ಧನಸ್ಸು ರಾಶಿಯಿಂದ ಮಕರರಾಶಿಗೆ ಸಂಚರಿಸುವ ಕಾಲವನ್ನು 'ಮಕರ ಸಂಕ್ರಾಂತಿ' ಎನ್ನುತ್ತಾರೆ. ಪ್ರತಿ ವರ್ಷ ಜನವರಿ 14 ಅಥವಾ 15ರಂದು ಸೂರ್ಯ ಮಕರರಾಶಿಗೆ ಪ್ರವೇಶ ಮಾಡುತ್ತಾನೆ. ಅನಂತರ ಆತನ ಪಥವು ಉತ್ತರಾಭಿಮುಖವಾಗಿ ಚಲಿಸಲು ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ಬೆಳಕು ಜಾಸ್ತಿ ಇರುತ್ತದೆ. 6 ತಿಂಗಳ ಕಾಲ ಉತ್ತರಾಯಣ. ನಂತರ ದಕ್ಷಿಣಾಯನ ಪ್ರಾರಂಭವಾಗುತ್ತದೆ.

ಪುರಾಣ ಮತ್ತು ಜ್ಯೋತಿಷ್ಯದ ಪ್ರಕಾರ ಉತ್ತರಾಯಣದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆಯಿದೆ. ಶ್ರೀಕೃಷ್ಣನು ಗೀತೆಯಲ್ಲಿ ಉತ್ತರಾಯಣ ಅತಿಶ್ರೇಷ್ಠ ಎಂದು ಹೇಳಿರುವನು. ಪಿತಾಮಹ ಭೀಷ್ಮರು ಬಾಣಗಳ ಮಂಚದ ಮೇಲೆ ಮಲಗಿ ಯಾತನೆಯನ್ನು ಅನುಭವಿಸುತ್ತಿದ್ದರೂ ದಕ್ಷಿಣಾಯನದಲ್ಲಿ ತನ್ನ ದೇಹವನ್ನು ತ್ಯಜಿಸಲು ಒಪ್ಪದೆ ಉತ್ತರಾಯಣ ಪುಣ್ಯಕಾಲದಲ್ಲಿ ಅಷ್ಟಮಿ ದಿನ ಸಾವನ್ನು ಬರಮಾಡಿಕೊಂಡರು. ಕೃತಯುಗದಲ್ಲಿ ಶಿವ ಮತ್ತು ಪಾರ್ವತಿಯರು ವಿವಾಹವಾಗಿದ್ದು, ಇಂದ್ರನಿಗೆ ಗೌತಮರು ಶಾಪ ವಿಮೋಚನೆ ಮಾಡಿದ್ದು, ನಾರಾಯಣನು ವರಾಹ ಅವತಾರದಿಂದ ಭೂಮಿಯ ಮೇಲೆ ಪಾದ ಸ್ಪರ್ಶ ಮಾಡಿದ್ದು, ಸಮುದ್ರಮಂಥನದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು ಹಾಗೂ ಋಷಿಮುನಿಗಳು ತಪಸ್ಸಿಗೆ ಆಯ್ಕೆ ಮಾಡಿಕೊಂಡಿದ್ದು ಸಹ ಉತ್ತರಾಯಣದಲ್ಲಿಯೇ. ಈ ಎಲ್ಲ ಕಾರಣಕ್ಕಾಗಿ ಉತ್ತರಾಯಣ ಪುಣ್ಯಕಾಲವಾಗಿದೆ.

**ಸಂಕ್ರಾಂತಿ ಹಬ್ಬ :** ಸಂಕ್ರಾಂತಿ ಹಬ್ಬವು ಯಾವ ಒಂದು ದೇವರ ಹಬ್ಬವೂ ಅಲ್ಲ. ಇದನ್ನು ಸಾಮಾನ್ಯವಾಗಿ 'ಎಳ್ಳು-ಬೆಲ್ಲ'ದ ಹಬ್ಬ ಎನ್ನುತ್ತಾರೆ. ರೈತರು ತಾವು ಬೆಳೆದ ಬೆಳೆಗಳನ್ನು ರಾಶಿರಾಶಿಯಾಗಿ ಹಾಕಿ ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಈ ಕಾರಣಕ್ಕಾಗಿ ಇದನ್ನು 'ಸುಗ್ಗಿಯ ಹಬ್ಬ' ಎನ್ನುತ್ತಾರೆ. ಸಂಕ್ರಾಂತಿ ಹಬ್ಬದ ದಿನ ಎಳ್ಳನ್ನು ದಾನ ಮಾಡಬೇಕೆಂಬ ನಿಯಮವಿದೆ. ಎಳ್ಳು ಶನಿ ಗ್ರಹದ ಪ್ರತಿನಿಧಿ. ಎಳ್ಳನ್ನು ದಾನ ಮಾಡಲು ಹೋದಾಗ



ಸಾಮಾನ್ಯವಾಗಿ ಅದನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಕಾರಣ ಅವರುಗಳ ದೋಷ ನಾವು ಸ್ವೀಕರಿಸಿದಂತೆ ಎಂದು. ಆದ್ದರಿಂದ ಎಳ್ಳಿನ ಜೊತೆಯಲ್ಲಿ ಬೆಲ್ಲ, ಕಡಲೆಬೀಜ, ಕೊಬ್ಬರಿಯನ್ನು ಮಿಶ್ರಣ ಮಾಡಿ ದಾನಮಾಡುವ ಪದ್ಧತಿ ಪ್ರಾರಂಭವಾಯಿತು. ಅಲ್ಲದೆ ಬೆಳೆದ ಬೆಳೆಗಳು ಆಗತಾನೆ ಮಾರುಕಟ್ಟೆಗೆ ಬಂದಿರುತ್ತವೆ. ಅವುಗಳನ್ನು ಪೂಜೆ ಮಾಡಿ ದಾನ ಧರ್ಮ ಮಾಡಿದರೆ ಫಲ ಇನ್ನೂ ಹೆಚ್ಚಾಗುತ್ತದೆ ಎಂಬ ನಂಬಿಕೆಯೂ ಇದೆ.

ಸಂಕ್ರಾಂತಿಯ ದಿನ ಹೆಣ್ಣುಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಮನೆಮನೆಗೆ ಹೋಗಿ ಎಳ್ಳನ್ನು ಬೀರಿ ಬರುತ್ತಾರೆ. ಮಕ್ಕಳಿಗೆ ಆರತಿಯನ್ನು ಮಾಡಿ ಮನೆಯೊಳಗೆ ಬರಮಾಡಿಕೊಳ್ಳುವ ಸಂಪ್ರದಾಯವಿದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಆ ದಿನ ಎತ್ತುಗಳಿಗೆ ಪೂಜೆಯನ್ನು ಸಲ್ಲಿಸಿ ಕಿಚ್ಚು ಹಾಯಿಸುತ್ತಾರೆ. ಇತರ ದೇಶಗಳಲ್ಲೂ ಈ ಹಬ್ಬವನ್ನು ವಿಭಿನ್ನ ರೀತಿಯಲ್ಲಿ ಆಚರಿಸುತ್ತಾರೆ.

ವೈಜ್ಞಾನಿಕ ರೀತಿಯಲ್ಲಿ ನೋಡಿದಾಗ ಸಂಕ್ರಾಂತಿಯು ಸಮಯದಲ್ಲಿ ಚಳಿ ಹೆಚ್ಚು ಇರುತ್ತದೆ. ಎಳ್ಳಿನ ಸೇವನೆಯಿಂದ ದೇಹದ ಉಷ್ಣತೆ ಹೆಚ್ಚಾಗುತ್ತದೆ ಹಾಗೂ ಚರ್ಮದ ಕಾಂತಿಯೂ ಸಹ ಹೆಚ್ಚುತ್ತದೆ. ಜಾನಪದ ಗೀತೆಯಲ್ಲೂ ಸಹ ಸಂಕ್ರಾಂತಿಯ ಬಗ್ಗೆ ಹೇಳಿದೆ. ಶಿವ ಮತ್ತು ಪಾರ್ವತಿಯರು ಲೋಕ ಸಂಚಾರ ವನ್ನು ಈ ಕಾಲದಲ್ಲಿ ಪ್ರಾರಂಭಿಸುತ್ತಾರಂತೆ. ಈ ಪುಣ್ಯ ದಿನದಲ್ಲಿ ಹಲವಾರು ದೇವತೆಗಳಿಗೆ ಶಾಪ ವಿಮೋಚನೆಯುಂಟಾಗಿದೆ.

'ಎಳ್ಳು - ಬೆಲ್ಲ ತಿಂದು ಒಳ್ಳೆಯ ಮಾತನಾಡು' ಎಂಬ ನಾಣ್ನುಡಿಯೂ ಇದೆ. ನಮ್ಮ ಮಾತು ಹಿತವಾಗಿದ್ದು ಇತರರಿಗೆ ಸಂತೋಷದಾಯಕವಾಗಿರಬೇಕಲ್ಲವೆ? 'ಸಂಕ್ರಾಂತಿ' ಎಂದರೆ ಬದಲಾವಣೆ. ಈ ಹಬ್ಬದಲ್ಲಿ ಪ್ರಕೃತಿಯಲ್ಲಿ ಬದಲಾವಣೆ ಯಾಗುವಂತೆ ಮನುಷ್ಯರ ನಡವಳಿಕೆಯಲ್ಲೂ ಒಳ್ಳೆಯ ಬದಲಾವಣೆ ಯಾದರೆ ಸಮಾಜಕ್ಕೆ ಉತ್ತಮ ಕೊಡುಗೆಯಾಗುತ್ತದೆಯಲ್ಲವೆ? ಅಂತಹ ಸದ್ಗುಣವನ್ನು ನಮ್ಮಲ್ಲಿ ರೂಢಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡೋಣ. ●

# ಸಮರ್ಥ ಭಾರತ

■ **ಶ್ವೇತಾದ್ರಿ**, ಬೆಂಗಳೂರು

ಶೀರ್ಷಿಕೆಯನ್ನು ನೋಡಿದಾಗ ಏನಿದು 'ಸಮರ್ಥ ಭಾರತ' ಎನ್ನುವ ಪ್ರಶ್ನೆ ಸಹಜವಾಗಿ ಏಳುತ್ತದೆ. ಭಾರತ ಮೊದಲಿನಿಂದಲೂ ಸಮರ್ಥವೇ. ಭಾರತದ ಸಾಧನೆ, ಸಮರ್ಥತೆಯನ್ನು ಭಾರತೀಯರೇ ಹೇಳುವುದರಲ್ಲಿ ಅತಿಶಯತೆಯೇನೂ ಇಲ್ಲ ಎನ್ನಿಸಬಹುದು. ಆದರೆ ವಿದೇಶೀಯರು ಭಾರತದ ಹಿರಿಮೆಯನ್ನು ಹೇಳುವ ಮೂಲಕ ಭಾರತ ಸಮರ್ಥ ಎಂದರೆ ಅದು ಎಲ್ಲರೂ ಹೆಮ್ಮೆಪಡುವಂತಹುದೇ. ಅಮೆರಿಕದ ಖ್ಯಾತ ಇತಿಹಾಸಕಾರ, ತತ್ವಜ್ಞಾನಿ ವಿಲ್‌ಡ್ಯುರಾಂಟ್‌ನ ಮಾತುಗಳನ್ನು ಗಮನಿಸೋಣ.

"ಭಾರತ ವಿಶ್ವದ ನಾಗರಿಕತೆಯ ಮಾತೃಭೂಮಿ ಮತ್ತು ಸಂಸ್ಕೃತ ಯುರೋಪಿಯನ್ ಭಾಷೆಗಳ ತಾಯಿ. ನಮ್ಮ ತತ್ವಜ್ಞಾನದ ಮೂಲ ಸ್ರೋತವೂ ಅವಳೇ. ಅರಬ್ಬರ ಮೂಲಕ ಗಣಿತವನ್ನು ಹೇಳಿಕೊಟ್ಟ ಮಾತೆ ಭಾರತಿ. ಬುದ್ಧನ ಮೂಲಕ ಶಾಂತಿಯನ್ನು ಬೋಧಿಸಿದ ಗುರು. ಹಳ್ಳಿಗಳ ಮೂಲಕ ಸ್ವಾವಲಂಬನೆಯನ್ನು ತೋರಿಸಿದ ಮಾರ್ಗದರ್ಶಕಿ ಭಾರತವೇ. ಭಾರತಮಾತೆ ಸತ್ಯವಾಗಿಯೂ ಇಡೀ ವಿಶ್ವದ ಮಾತೆ"!

ಮತ್ತೊಬ್ಬ ವಿದೇಶೀ ವಿದ್ವಾಂಸರಾದ ವಿಲಿಯಮ್ ಗಿಲ್ಬರ್ಟ್ ಹೀಗೆ ಹೇಳಿದ್ದಾರೆ "ಮಾನವ ಸಂಸ್ಕೃತಿಯ ಇತಿಹಾಸದಲ್ಲಿ, ಎಲ್ಲ ಕ್ಷೇತ್ರಗಳಲ್ಲೂ ಭಾರತದ ಕೊಡುಗೆ ಅಪಾರ. ಗೃಹೋಪಯೋಗಿ ಕೋಳಿ ಸಾಕಣೆ, ಶುದ್ಧ ಅರಗು, ನಿಂಬೆ, ಹತ್ತಿ, ಸಕ್ಕರೆ, ದಾಲ್ಚಿನ್ನಿ, ಮೆಣಸು, ಚದುರಂಗ, ಪೋಲೋನಂತಹ ಕ್ರೀಡೆ, ಸೊನ್ನೆ–ದಶಮಾಂಶ ಪದ್ಧತಿ, ನೀತಿಕಥೆಗಳು ಇನ್ನೂ ಮುಂತಾದ ಅದ್ಭುತ ಕರಕುಶಲ ವಸ್ತುಗಳು ಮತ್ತು ತತ್ವಜ್ಞಾನದ ಚಿಂತನೆಗಳು, ಧಾರ್ಮಿಕ ವಿಚಾರಗಳು–ಇವೆಲ್ಲವೂ ಭಾರತದಿಂದಲೇ ಬಂದಿವೆ".

India what can it teaches ಕೃತಿಯನ್ನು ಪ್ರೊ॥ ಮ್ಯಾಕ್ಸ್‌ಮುಲ್ಲರ್ ಭಾರತದ ಬಗ್ಗೆ ಬರೆದಿರುವುದು: "ಇಡೀ ವಿಶ್ವದಲ್ಲಿ ಪ್ರಕೃತಿ ನೀಡಬಹುದಾದ ಎಲ್ಲ ಸಂಪತ್ತು ಸೌಂದರ್ಯಗಳಿಂದ ಕೂಡಿ ಸ್ವರ್ಗಸಮಾನವಾದ ದೇಶವೊಂದಿದ್ದರೆ ಅದು ಭಾರತ. ಮಾನವನ ಬೌದ್ಧಿಕ ಮಟ್ಟ ಅತ್ಯುನ್ನತವಾಗಿದ್ದು, ವಿಜ್ಞಾನದ ಅನೇಕ ಸಂಶಯಗಳಿಗೆ ಪರಿಹಾರ ನೀಡಿದ ದೇಶವಿದ್ದರೆ ಅದು ಭಾರತ. ಜೊತೆಗೆ ತನ್ನ ಪ್ರಭಾವದಿಂದ ಯುರೋಪಿಯನ್ನರ ಸಾಹಿತ್ಯ, ಗ್ರೀಕ್– ರೋಮನ್ನರ ಸಾಹಿತ್ಯವನ್ನು ಪರಿಪೂರ್ಣವಾಗಿ ಬೆಳೆಸಿದ ದೇಶವಿದ್ದರೆ ಅದು ಭಾರತ".

ಇನ್ನು ಪ್ರಸಿದ್ಧ ವಿದ್ವಾಂಸರಾದ ಲಾರ್ಡ್ ಮೆಕಾಲೆ "ಕ್ರಿಸ್ತನ ಉಗಮವಾಗುವುದಕ್ಕಿಂತ ಮುಂಚೆ, ಯಾವಾಗ ಯುರೋಪಿಯನ್ನರು ಇನ್ನೂ ಬಣ್ಣ ಬಳಿದುಕೊಂಡು ಕಾಡಿನಲ್ಲಿ ಅಲೆಮಾರಿಗಳಾಗಿ ಬದುಕುತ್ತಿದ್ದರೋ, ಆ ಕಾಲದಲ್ಲಾಗಲೇ ಭಾರತದ ಮೂಲೆ ಮೂಲೆಯಲ್ಲಿಯೂ ನಾಗರಿಕತೆಯ ಔನತ್ಯ ವಿಜೃಂಭಿಸುತ್ತಿತ್ತು.".

ಈ ಎಲ್ಲ ಹೇಳಿಕೆಗಳೂ ಭಾರತದ ಹಿರಿಮೆ ಗರಿಮೆಗಳನ್ನು ಸಮರ್ಥಿಸುತ್ತದೆ ನಿಜ. ಆದರೆ ಈಗ ಇದರ ಪ್ರಸ್ತಾಪ ಏಕೆ? ಮೇಲಿನ ಹೇಳಿಕೆಗಳು ವಿದೇಶಿಯರು ಭಾರತದ ಸಾಧನೆಗಳನ್ನು ಗುರುತಿಸಿ, ಭಾರತದತ್ತ ಮುಖಮಾಡುತ್ತಿದ್ದಾರೆ. ಆದರೆ ನಾವು, ವಿಶೇಷವಾಗಿ ಯುವಕರು ಭಾರತದಲ್ಲಿ ವಿದ್ಯೆಯನ್ನು ಗಳಿಸಿ ಪದವೀಧರರಾಗಿ, ಹಣಗಳಿಕೆ ಹಾಗೂ ವಿದೇಶೀ ವ್ಯಾಮೋಹಕ್ಕೆ ಒಳಗಾಗಿ ವಿದೇಶಗಳಲ್ಲಿ ನೆಲೆಸಿ, ತಮ್ಮ ಪ್ರತಿಭೆಯನ್ನು ವಿದೇಶಗಳಿಗೆ ಧಾರೆ ಎರೆಯುತ್ತಿರುವುದನ್ನು ಗಮನಿಸುತ್ತಿದ್ದೇವೆ. ಅಷ್ಟಕ್ಕೇ ಸೀಮಿತವಾಗದೆ ವಿದೇಶಿಯತೆಯನ್ನೆಲ್ಲಾ ಹೊಗಳುವ, ಭಾರತೀಯತೆಯನ್ನೂ ಮರೆಯುವ, ಕೆಲವೊಮ್ಮೆ ತಿರಸ್ಕಾರ ಭಾವದಿಂದ ಕಾಣುವ ಮನೋಭಾವ ಬೆಳೆಯುತ್ತಿದೆ. ಯುವಜನತೆ ನಮ್ಮ ಸಂಸ್ಕೃತಿಯ, ಸಾಧನೆಗಳ ಸತ್ವ, ಹಿರಿಮೆ–ಗರಿಮೆಗಳ ಪರಿಚಯವನ್ನು ಹೊಂದಿ ಭಾರತದ ಬಗ್ಗೆ ಅಭಿಮಾನವನ್ನು ಹೊಂದುವುದು ಇಂದಿನ ಅಗತ್ಯ. ಇಂತಹ ಒಂದು ಪ್ರಯತ್ನವನ್ನು ಶ್ರೀಯುತ ಚಮನ್ ಲಾಲ್ ಅವರು "India mother of us all" ಗ್ರಂಥದಲ್ಲಿ ಮಾಡಿದ್ದಾರೆ. ಈ ಗ್ರಂಥವನ್ನೂ ಸಂಗ್ರಹ ರೂಪದಲ್ಲಿ ಕನ್ನಡಕ್ಕೆ 'ವಿಶ್ವಮಾತೆ ಭಾರತಿ' ಕೃತಿಯಲ್ಲಿ ಯುವ ಎಂಜಿನಿಯರಾದ ಶ್ರೀಯುತ ಭೀಮಸೇನ್ ಪುರೋಹಿತ್ ಅವರು ಪರಿಚಯಿಸಿದ್ದಾರೆ.

ಶಿಕ್ಷಕ ಯಾವಾಗಲೂ ಶಿಕ್ಷಕನೇ ತಾನೇ! 'ವಿಶ್ವಮಾತೆ ಭಾರತಿ' ಕೃತಿಯನ್ನು ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಪರಿಚಯಿಸಿ, ತಲುಪಿಸುವ ಚಿಂತನೆಯು ಕೆಲವರು ನಿವೃತ್ತ ಶಿಕ್ಷಕರ ಮನಸ್ಸಿಗೆ ಬಂದಿತು. 2010 ರಲ್ಲಿ ಸ್ಥಾಪಿತವಾದ 'ಪ್ರತಿಭಾ ವಿಕಾಸ ಪ್ರತಿಷ್ಠಾನ'ದ ಮೂಲಕ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಸಮರ್ಥ ಭಾರತ' ಶೀರ್ಷಿಕೆಯಲ್ಲಿ ಪರೀಕ್ಷೆಯನ್ನು ನಡೆಸಲು ನಿರ್ಧರಿಸಿ 2014ರಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತಾದ ಮೊದಲ ಪರೀಕ್ಷೆಯನ್ನು ನಡೆಸಲಾಯಿತು. ಪರೀಕ್ಷೆಗೆ ದೊರೆತ ಪ್ರೋತ್ಸಾಹದಿಂದಾಗಿ 'ಸಮರ್ಥ ಭಾರತ'ದ ಎರಡನೆಯ ಪರೀಕ್ಷೆಯನ್ನು 'ವಿಶ್ವಮಾತೆ ಭಾರತಿ' ಕೃತಿಯನ್ನು ಆಧರಿಸಿ ಪ್ರಾಯೋಗಿಕವಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ಆಯ್ದ 12 ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಆಯೋಜಿಸಲಾಯಿತು. 2018ರ ನವೆಂಬರ್ 17ರಂದು ನಡೆದ ಪರೀಕ್ಷೆಯಲ್ಲಿ 525 ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಮೂರು ಬಹುಮಾನಗಳನ್ನು ರೂ 5000/– ಪ್ರಥಮ ಬಹುಮಾನ, ರೂ 3000/–ದ ದ್ವಿತೀಯ ಬಹುಮಾನ, ರೂ 2000/– ತೃತೀಯ ಬಹುಮಾನವನ್ನು ನೀಡಲಾಯಿತು. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ರೂ 500/– ರ ಸಮಾಧಾನಕರ ಬಹುಮಾನಗಳನ್ನು ಘೋಷಿಸಲಾಯಿತು. ಬಹುಮಾನ ವಿತರಣಾ ಸಮಾರಂಭವನ್ನು 2019,

ಪುಟ 9 ಕ್ಕೆ ➢

# ದಿಟ್ಟ, ನೇರ ನಿರಂತರ, ನಿಸ್ವಾರ್ಥ, ವಿಶೇಷ ವ್ಯಕ್ತಿತ್ವ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ದಿನಾಂಕ 23.12.2018 ರ ಭಾನುವಾರ ಅದೊಂದು ಮಹತ್ವಪೂರ್ಣ ದಿನ. ಯಾದವಸ್ಮೃತಿಯ ಶಿಕ್ಷಕ ಸಂಘದ ಕಾರ್ಯಾಲಯದಲ್ಲಿ ವಾಸಿಸುತ್ತಿರುವ ನಮ್ಮ ಪೂರ್ಣಾವಧಿ ಹಿರಿಯ ಕಾರ್ಯಕರ್ತರಾದ ಶ್ರೀ ಜಿ.ಎಸ್ ಕೃಷ್ಣಮೂರ್ತಿಯವರ ಬಹುಕಾಲದ ಕನಸು ನನಸಾದ ದಿನ. (ಹಲವು ತಿಂಗಳುಗಳಿಂದ ಅವರ ಕನಸನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಲೇ ಇದ್ದರು ನಮ್ಮ ಕೃಷ್ಣಮೂರ್ತಿ)

ಶಿಕ್ಷಕ ಸಂಘಕ್ಕೆ ಕೃಷ್ಣಮೂರ್ತಿಯವರ ಪ್ರವೇಶವಾದದ್ದು 1980 ರ ದಶಕದ ಪ್ರಾರಂಭದಲ್ಲಿ. ಅಂದಿನಿಂದ ಅವರು ಸಹಯೋಗಿಗಳಾಗಿ ಶಿಕ್ಷಕ ಸಂಘದಲ್ಲಿ ಸಕ್ರಿಯವಾಗಿ ಕೆಲಸಮಾಡಿ ಸಂಘದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದವರು. 'ಹಲವರು ನಾವೆಲ್ಲಾ ಒಂದೇ ಕುಟುಂಬದ ಸದಸ್ಯರು ಇಂದಲ್ಲದೆ ಅಂದಿನ ನಮ್ಮ ಸಹಯೋಗಿ ದಿವಂಗತ ಡಿ.ಎ ಸತ್ಯನಾರಾಯಣನೊಂದಿಗೆ ಕೃಷ್ಣಮೂರ್ತಿ ಮತ್ತು ನಾನು ಈ ಎಲ್ಲ ಕುಟುಂಬಗಳ ಮನೆಗಳಿಗೂ ಹೋಗಿ ಬಂದು ಅವರೆಲ್ಲಾ ನಮ್ಮನ್ನು ಅವರ ಕುಟುಂಬದ ಸದಸ್ಯರೆಂದೇ ಇಂದಿಗೂ ಭಾವಿಸಿರುವುದು ಶಿಕ್ಷಕ ಸಂಘದ ಕಾರ್ಯಶೈಲಿಯ ವಿಶೇಷತೆ.

ಕೃಷ್ಣಮೂರ್ತಿ ಹೆಚ್ಎ.ಎಲ್ ಶಾಲೆಯಲ್ಲಿ ಗಣಿತ, ವಿಜ್ಞಾನದ ಅಧ್ಯಾಪಕರು ಸಹವರ್ತಿ ಶಿಕ್ಷಕರಿಗೆಲ್ಲಾ ಅನೇಕ ರೀತಿಯ ಸಲಹೆ ಸಹಕಾರಗಳನ್ನು ನೀಡುತ್ತಿದ್ದ ಅಚ್ಚುಮೆಚ್ಚಿನ ಗೆಳೆಯರು. ಇವರೊಂದಿಗೆ ಮತ್ತು ಇವರ ನಂತರ ನಿವೃತ್ತರಾದ ಅವರಿಗೆಲ್ಲಾ ಇವರ ಮೂಲಕವೇ ಶಿಕ್ಷಕ ಸಂಘದ ಪರಿಚಯ.

80 ರ ದಶಕದಿಂದ ಇಂದಿನವರೆಗೆ ಕಾವೇರಿಯಲ್ಲಿ ಬಹಳಷ್ಟು ನೀರು ಹರಿದು ಹೋಗಿದೆ. ಶಿಕ್ಷಕ ಸಂಘದಲ್ಲೂ ಅಂದಿನ ಅನೇಕರು ಹಲವು ಕಾರಣಗಳಿಂದ ಇಂದು ಸಕ್ರಿಯರಾಗಿಲ್ಲ. ಅವರ ಜಾಗವನ್ನು ಹಲವರು ತುಂಬಿದ್ದಾರೆ. ನದಿ ನಿರಂತವಾಗಿ ಹರಿಯುತ್ತಲೇ ಇದೆ. ಅದು ಎಂದಿಗೂ ಬತ್ತದು. ಹಳೆಬೇರು, ಹೊಸಚಿಗುರು ಕೂಡಿರಲು ಮರ ಸೊಬಗು ಎಂದ ಡಿ.ವಿ.ಜಿ ಯವರು ನುಡಿಯಂತೆ ಕೃಷ್ಣಮೂರ್ತಿಯವರ ಕನಸೂ ಇದೇ ಆಗಿತ್ತು. ಅಂದಿನ ಎಲ್ಲ ಹಿರಿಯ ಕಾರ್ಯಕರ್ತರನ್ನು ಇಂದಿನ ಹೊಸ ಪೀಳಿಗೆ ಯುವಕರೊಂದಿಗೆ ಜೋಡಿಸಬೇಕು ಪರಸ್ಪರರಲ್ಲಿ ಬಾಂಧವ್ಯ ಬೆಸೆಯಬೇಕು ಎಂಬ ಈ ಕನಸನ್ನು ಹಲವು ದಿನಗಳಿಂದ ನನ್ನೊಂದಿಗೆ ಹಂಚಿಕೊಳ್ಳುತ್ತಲೇ ಇದ್ದರು. ನಾನೂ ಈ ಕನಸನ್ನು ಹಲವಾರು ಬಾರಿ ಕಂಡಿದ್ದೆ. ಯಾವುದಕ್ಕೂ ಕಾಲ ಕೂಡಿಬರಬೇಕು. ಆ ಕಾಲ ಕೂಡಿಬಂದ ದಿನ ಡಿಸೆಂಬರ್ 23ರ ಭಾನುವಾರ.

80–90ರ ದಶಕದ ಬೆಂಗಳೂರು ನಗರದ ಅನೇಕ ಕಾರ್ಯಕರ್ತರು ಅಂದು ಬೆಳ್ಳಿಗ್ಗೆ 10–30ರಿಂದಲೇ ಶೇಷಾದ್ರಿಪುರದಲ್ಲಿರುವ ಯಾದವಸ್ಮೃತಿಯಲ್ಲಿ ಸೇರತೊಡಗಿದರು. ಇವರೊಂದಿಗೆ ಜಿ.ಎಸ್.ಕೆ. ಅವರ ಎಲ್ಲಾ ನಿವೃತ್ತ ಸಹೋದ್ಯೋಗಿಗಳು. 11.30ಕ್ಕೆ ಸಂಘದ ಸ್ಥಾಪಕರಲೊಬ್ಬರೂ ಇಂದಿನ ಮಹಾಪೋಷಕರೂ ಆದ ಶ್ರೀ ನರಹರಿಯವರ ಅಧ್ಯಕ್ಷತೆಯಲ್ಲಿ ಒಂದು ಪುಟಾಣಿ ಸಮಾರಂಭ. 85 ವರ್ಷದ ತರುಣ, ಹಿಂದಿನ ಬೆಂಗಳೂರು ನಗರದ ಖಜಾಂಚಿ ಶ್ರೀ ಜಯತೀರ್ಥರಾಯರಿಂದ ಸುಶ್ರಾವ್ಯ ದೇವತಾ ಪ್ರಾರ್ಥನೆ. ನಂತರ ಹೆಚ್.ಎನ್.ಆರ್.ರವರಿಂದ ಸಭೆಯ ಉದ್ದೇಶ ಹಾಗೂ ವೇದಿಕೆಯಲ್ಲಿದ್ದ ಶ್ರೀ ವಿ.ಜಿ ಹೆಗಡೆ, ಶ್ರೀ ಜಿ.ಎಸ್.ಕೆ ಹಾಗೂ ಶ್ರೀ ಕೃ. ನರಹರಿಯವರ ಸ್ವಾಗತ ಮತ್ತು ಪರಿಚಯ. ಹಿರಿಯ ಕಿರಿಯ ಕಾರ್ಯಕರ್ತರೆಲ್ಲಾ ತಮ್ಮ ಸ್ವ–ಪರಿಚಯ ಮಾಡಿಕೊಡುತ್ತಾ ಶಿಕ್ಷಕ ಸಂಘದೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿದರು.

ಕಾಕತಾಳೀಯವೆಂಬಂತೆ ಅದೇ ತಾನೇ ಸಹಸ್ರ ಚಂದ್ರದರ್ಶನ ಮಾಡಿದ್ದ ಜಿ.ಎಸ್.ಕೃಷ್ಣಮೂರ್ತಿ ಅವರನ್ನು ಮೈಸೂರು ಪೇಟ ತೊಡಿಸಿ ಶ್ರೀ ನರಹರಿಯವರು ಸನ್ಮಾನಿಸಿ, ಸಂಘಕ್ಕೆ ಅವರು ನೀಡಿದ ಸೇವೆಯನ್ನು ಸ್ಮರಿಸಿದರು. ಕೃಷ್ಣಮೂರ್ತಿಯವರ ಸ್ನೇಹಪರತೆ, ಉದಾರತೆ, ಸಹಜ ಪರಿಶ್ರಮ, ಶಿಕ್ಷಕ ಸಂಘದ ಬೆಳವಣಿಗೆಯ ಬಗೆಗಿನ ಕಾಳಜಿಗಳನ್ನು ಅನೇಕರು ಸ್ಮರಿಸಿ ಅವರಿಗೆ ದೀರ್ಘಾಯುಷ್ಯವನ್ನು ಕೋರಿದರು.

ಕೃಷ್ಣಮೂರ್ತಿಯವರು ತಮ್ಮ ಕೃತಜ್ಞತಾ ಭಾಷಣದಲ್ಲಿ 'ಸಂಘಕ್ಕೆ ನಾನು ಕೊಟ್ಟದ್ದಕ್ಕಿಂತ, ಪಡೆದದ್ದೇ ಹೆಚ್ಚು, ನನ್ನ ಜೀವನದಲ್ಲಿ ನನ್ನ ಸಂಘ ಸ್ನೇಹಿತರು, ಸಹೋದ್ಯೋಗಿ ಮಿತ್ರರು ನಾನು ವಾಸಿಸುತ್ತಿರುವ ಕಾರ್ಯಾಲಯದ ಬಂಧುಗಳು ಹೀಗೆ ಬಹುದೊಡ್ಡ ಪರಿವಾರ ಸಿಕ್ಕಿದ್ದೇ ಒಂದು ಸೌಭಾಗ್ಯ. ನಾವೆಲ್ಲಾ ಸಂಘವನ್ನು ಬೆಳೆಸಲು ಶ್ರಮ ವಹಿಸಿದ್ದೇವೆ. ಆದರೂ ಅದು ಇನ್ನೂ ದೇಶೋವಿಶಾಲವಾಗಿ ಹೆಮ್ಮರದಂತೆ ಬೆಳೆಯಬೇಕಿದೆ. ಅದಕ್ಕಾಗಿ ಮತ್ತೊಮ್ಮೆ ಹಿರಿಯ ಕಿರಿಯರೆಲ್ಲಾ ಒಟ್ಟಾಗಿ ಕೈ ಜೋಡಿಸೋಣ, ಮತ್ತೆ ಮತ್ತೆ ಹೀಗೇ ಸೇರೋಣ' ಎಂದು ನುಡಿದರು.

ಎಲ್ಲರೂ ಸಹಭೋಜನದಲ್ಲಿ ಪಾಲ್ಗೊಂಡು ಹಳೆಯ ನೆನಪುಗಳನ್ನು ಮತ್ತೊಮ್ಮೆ ಮಗದೊಮ್ಮೆ ಕೆದಕುತ್ತಾ, ಇಂಥದೊಂದು ಕಾರ್ಯಕ್ರಮವನ್ನು ಮಾಡಿ ನಮ್ಮೆಲ್ಲರನ್ನೂ ಒಟ್ಟಾಗಿ ಸೇರಿಸಿ ಶಿಕ್ಷಕ ಸಂಘದ ಹಳೆಯ ಸಿಹಿ ನೆನಪುಗಳನ್ನು ಮೆಲುಕಿಸುವಂತೆ ಮಾಡಿದ ಜಿ.ಎಸ್.ಕೆ ಅವರಿಗೆ ಕೃತಜ್ಞತೆಗಳನ್ನು ಸೂಚಿಸುತ್ತಾ ತೆರಳಿದರು. •

# ನೇತಾಜಿ ಯುವ ಪೀಳಿಗೆಗೆ ಆದರ್ಶ

ಆರ್. ಸೀತಾಲಕ್ಷ್ಮಿ
ಹಿರಿಯ ಮಹಿಳಾ ಮಾರ್ಗದರ್ಶಕರು & ಪೋಷಕರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



ಸುಭಾಷ್ ಚಂದ್ರ ಬೋಸ್! ಸ್ವಾತಂತ್ರ್ಯಾನಂತರದ ಎರಡು ಮೂರು ಪೀಳಿಗೆಗೆ ಮಸುಕು ಮಸಕಾಗಿ ಈ ಹೆಸರಿನ ನನೆಪು. ಇಂದಿನ ಪೀಳಿಗೆಗಂತೂ ಕೇಳಿದ್ದುಂಟು. ಅವರ ಸಾಧನೆಗಳ ಪರಿಚಯವಿಲ್ಲ. ಕಾರಣ! ಕಳೆದ ಅನೇಕ ದಶಕಗಳಲ್ಲಿ ಈ ನಾಡನ್ನಾಳಿದ ನಾಯಕರು ತಮ್ಮ ಕುಟುಂಬವೇ ಸ್ವಾತಂತ್ರ್ಯ ಗಳಿಸಿಕೊಟ್ಟವರು ಎಂಬ ತುತ್ತೂರಿ ಊದಿದ್ದು ಇಂದಿಗೂ ಊದುತ್ತಿರುವುದು. ಇದರ ಕೃಪಾಕಟಾಕ್ಷಕ್ಕೆ ಒಳಗಾದ ಭಟ್ಟಂಗಿ ಪಡೆ ಹಾಗೂ ಟಿ.ವಿ ಹಾಗೂ ಪತ್ರಿಕಾ ಮಾಧ್ಯಮಗಳು ನಡೆಸಿದ ಪ್ರಚಾರದ ಪ್ರಭಾವ. ಇದರ ಜತೆಯಲ್ಲೇ ನಮ್ಮ ಪಠ್ಯಕ್ರಮ, ಪಠ್ಯಪುಸ್ತಕಗಳನ್ನು ರೂಪಿಸಿದ ಅಂಧ(ಕುರುಡು) ಇತಿಹಾಸಕಾರರ ಅಪಾರ ಶ್ರಮ, ಇರಲಿ. ಯಾವ ಕರಿಮೋಡವೂ ಎಲ್ಲ ಕಾಲಕ್ಕೂ ಸೂರ್ಯನನ್ನು ಮರೆಮಾಡಲಾಗುವುದಿಲ್ಲ. ಅಂತೆಯೇ ಸತ್ಯವನ್ನು ಮರೆಮಾಚಲೂ ಆಗುವುದಿಲ್ಲ. ಹೀಗಾಗಿ ಸುಭಾಷ್‌ಬಾಬು ಬಗ್ಗೆ ಅನೇಕ ಸಂಶೋಧಕರು ಅವರ ಜೀವನ ಸಾಧನೆಗಳ ಬಗ್ಗೆ ಸತ್ಯ ಸಂಗತಿಯನ್ನು ತೆರೆದಿಟ್ಟಿದ್ದಾರೆ. ಈಗ ಬೇಕಾಗುವುದು ಅದನ್ನು ನೋಡುವ ಕಣ್ಣುಗಳು, ಅರಿಯುವ ಯುವ ಮನಸ್ಸುಗಳು.



ಜನವರಿ 23, 1897ರಂದು ಒರಿಸ್ಸಾದ ಕಟಕ್‌ನಲ್ಲಿ ಸುಭಾಷರ ಜನನ. ತಂದೆ ಜಾನಕೀನಾಥ ಬೋಸ್. ತಾಯಿ ಪ್ರಭಾವತಿಯವರಿಗೆ 6ನೇ ಮಗನಾಗಿ ಜನಿಸಿದ ಸುಭಾಷರು ಸಂಕೋಚ ಪ್ರವೃತ್ತಿಯವರಾಗಿದ್ದರು. 5 ವರ್ಷ ವಯಸ್ಸಿನಲ್ಲಿ ಇಂಗ್ಲೀಷ್ ಮಿಷನರಿ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದರು. ಶಾಲೆಯ ವ್ಯವಸ್ಥೆ ಮತ್ತು ಗುರು-ಶಿಷ್ಯರ ಸಂಬಂಧ ಸುಭಾಷರಿಗೆ ಹಿಡಿಸಿತು. ಆದರೆ ಶಾಲೆಯ ವಾತಾವರಣ ಇಷ್ಟವಾಗಲಿಲ್ಲ. 11ನೇ ವರ್ಷದಲ್ಲಿ ರ್‍ಯಾವೆನ್‌ಶಾ ಕೊಲಿ ಜಿಯಟೆ ಶಾಲೆ ಸೇರಿದ್ದು ಅವರ ಮನಸ್ಸಿಗೆ ಸಮಾಧಾನವಾಯಿತು.

ವಿವೇಕಾನಂದರ ಪತ್ರಗಳು ಮತ್ತು "ಕೊಲಂಬೋದಿಂದ ಆಲ್ಮೋರಾಕ್ಕೆ" ಉಪನ್ಯಾಸಗಳು ವಿಶೇಷವಾಗಿ ಸುಭಾಷ್‌ರಿಗೆ ಮೆಚ್ಚಿಗೆಯಾದವು. ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ವಿವೇಕಾನಂದರು ಸ್ಫೂರ್ತಿಸ್ಥಾನವಾಗಿ ಅವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು 15ನೇ ವಯಸ್ಸಿನಲ್ಲಿ ಮುಗಿಸಿ ಕಲ್ಕತ್ತದಲ್ಲಿ ಇಂಟರ್‌ಮೀಡಿಯಟ್ ಓದಲು ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು. ಮಹರ್ಷಿ ಅರವಿಂದರ ಭಕ್ತರಾಗಿದ್ದ ಸುಭಾಷರು 'ಆರ್ಯ' ಮಾಸಪತ್ರಿಕೆಯನ್ನು ತಪ್ಪದೇ ಓದುತ್ತಿದ್ದರು. ಎಳೆಯ ವಯಸ್ಸಿನಿಂದಲೇ ಆಧ್ಯಾತ್ಮಶ್ರವಣರಾಗಿದ್ದರು.

ಸಮಾಜದೊಡನೆ ತಾಧ್ಯಾತ್ಮವನ್ನು ಹೊಂದಿದ್ದು, ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ತಮಗೆ ಉಚಿತವೆನಿಸಿದ ಕೆಲಸಗಳನ್ನು ಧೈರ್ಯದಿಂದಲೂ ಆತ್ಮವಿಶ್ವಾಸದಿಂದಲೂ ಮಾಡುವುದಲ್ಲದೆ ಅದರಿಂದ ಅಲೌಕಿಕ ಆನಂದವನ್ನು ಪಡೆಯುತ್ತಿದ್ದರು. ಸಮಾಜದಲ್ಲಿನ ಅವರ ತಾಧ್ಯಾತ್ಮಕ ಬಗ್ಗೆ ಒಂದು ಘಟನೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಕಲ್ಕತ್ತದಲ್ಲಿ ಮನೆಯ ಎದುರಿಗೆ ಪ್ರತಿನಿತ್ಯ ಒಬ್ಬ ವಯಸ್ಸಾದ ಮುದುಕಿ ಭಿಕ್ಷೆಗಾಗಿ ಕುಳಿತಿರುತ್ತಿದ್ದಳು. ಅವಳನ್ನು ನೋಡಿ ಇಂತಹವರು ಸಮಾಜದಲ್ಲಿ ಇರುವಾಗ ನನಗೆ ಭೋಗಜೀವನ ನಡೆಸಲು ಯಾವ ಅಧಿಕಾರವಿದೆ ಎಂದು ಚಿಂತಿತರಾಗುತ್ತಿದ್ದರು. ಮನೆಯಿಂದ 3 ಮೈಲಿ ದೂರದ ಕಾಲೇಜಿಗೆ ಹೋಗಿ ಬರಲು ತಂದೆ ಕಾಸುಕೊಡುತ್ತಿದ್ದರು. ಕಾಲ್ನಡಿಗೆಯಲ್ಲಿ ಕಾಲೇಜಿಗೆ ಹೋಗಿ ಆ ಪುಡಿಗಾಸುಗಳನ್ನು ಉಳಿಸಿ ಮುದುಕಿಗೆ ಆಗಾಗ ಕೊಡುತ್ತಾ ಬಂದರು.

ಭಾರತದಲ್ಲಿನ ತಮ್ಮ ಶಿಕ್ಷಣ ಮುಗಿಸಿದ ನಂತರ ತಂದೆಯವರ ಆಗ್ರಹದಂತೆ ಇಂಗ್ಲೆಂಡಿಗೆ ತೆರಳಿ ಕೇಂಬ್ರಿಡ್ಜ್ ವಿಶ್ವವಿದ್ಯಾಲದಿಂದ ಪದವಿ ಗಳಿಸಿದರು. ಕಾಲೇಜು ದಿನಗಳಲ್ಲಿ ಸುಭಾಷರು ಹೇಗಿದ್ದರೆಂಬುದನ್ನು ಅವರ ಸಹಪಾಠಿ ಐ ಸಿ ಎಸ್ ಅಧಿಕಾರಿಯಾಗಿದ್ದ ಸುಕ್ಥಂಕರ್ ಅವರ ಮಾತುಗಳಲ್ಲಿ **"ಸುಭಾಷ್‌ರವರದ್ದು ಸದಾ ಶಿಸ್ತು, ಅಚ್ಚುಕಟ್ಟು. ನಮ್ಮಂತೆ ಓದುತ್ತಿದ್ದ ಪುಸ್ತಕವನ್ನು ಸೋಫಾದ ಮೇಲೆ ಅವರು ಎಂದೂ ಎಸೆದು ಹೋದದ್ದಿಲ್ಲ. ಅವರ ಟಿಪ್ಪಣಿ ಪುಸ್ತಕಗಳೆಲ್ಲ ಸುವ್ಯವಸ್ಥಿತ; ಉಡಿಗೆ-ತೊಡಗೆಗಳೂ ಅಷ್ಟೆ. ಶುಭ್ರವಾದ ಇಸ್ತ್ರೀ ಮಾಡಿದ ಬಟ್ಟೆಯನ್ನೇ ಸದಾ ಧರಿಸಿದವರು. ಅವರ ಬಟ್ಟೆಯ ಮೇಲೆ ಕೊಳೆಯ ಕಲೆಯನ್ನು ಯಾರೂ ಕಂಡದ್ದಿಲ್ಲ. ಭಾರತದ ಬಗ್ಗೆ ಬ್ರಿಟಿಷರಲ್ಲಿ ಗೌರವವನ್ನು ಮೂಡಿಸಬೇಕು ಎಂದು ಸುಭಾಷರಿಗೆ ಇದ್ದ ಕಾಳಜಿಯನ್ನು ಬೇರೆ ಯಾರಲ್ಲಿಯೂ ನಾನು ಕಾಣಲಿಲ್ಲ."**

ತಂದೆಯ ಆಗ್ರಹದಂತೆ 1920 ಸೆಪ್ಟೆಂಬರ್‌ನಲ್ಲಿ ಇಡೀ ತಂಡದಲ್ಲಿ 4ನೇ ಸ್ಥಾನವನ್ನು ಗಳಿಸಿ ಐ.ಸಿ.ಎಸ್ ಪರೀಕ್ಷೆಯನ್ನು ಕೇವಲ ತಮ್ಮ 23ನೇ ವಯಸ್ಸಿನಲ್ಲಿ ಮುಗಿಸಿದರು. ಆದರೆ ಅವರ ಮನಸ್ಸು ಬ್ರಿಟಿಷರ ಗುಲಾಮಿ ಕೆಲಸವನ್ನು ಮಾಡಲು ಒಪ್ಪುತ್ತಿರಲಿಲ್ಲ. ಕೇವಲ ಐಹಿಕ ಪ್ರಗತಿಗಾಗಿ ನನ್ನ ಆತ್ಮವನ್ನು ಬಲಿ ಕೊಡಲೇ ಎಂಬ ವಿಚಾರ ಒಂದೆಡೆ.

ಪುಟ 10 ಕ್ಕೆ ➢

ಭೂರಮೆ

# ಗಣರಾಜ್ಯದಿನ–ಒಂದು ಚಿಂತನೆ

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಪ್ರತಿವರ್ಷ ಜನವರಿ 26, ನಮ್ಮ ಗಣರಾಜ್ಯ ದಿನಾಚರಣೆಯ ಸಂಭ್ರಮವನ್ನು ದೇಶದಾದ್ಯಂತ ಕಾಣುತ್ತೇವೆ. ಶಾಲಾಮಕ್ಕಳಿಗೆ ಪಥಸಂಚಲನ, ಬ್ಯಾಂಡ್‌ಸೆಟ್ ಮೂಲಕ ದೇಶಭಕ್ತಿಯ ಹಾಡುಗಳ ಶ್ರವಣ, ಧ್ವಜಾರೋಹಣ, ಸಿಹಿ ಹಂಚುವಿಕೆ ಮುಂತಾದ ಕಾರ್ಯಕ್ರಮಗಳ ಜೊತೆಗೆ 'ಪ್ರಜಾಪ್ರಭುತ್ವ' ರಾಷ್ಟ್ರದಲ್ಲಿ ನಮ್ಮದೇ ಸಂವಿಧಾನವನ್ನು 1950ರಿಂದ ಅಳವಡಿಸಿಕೊಂಡ ವಿಚಾರವನ್ನು ತಿಳಿಯಹೇಳುವುದರಲ್ಲಿ ಮುಕ್ತಾಯ ಮಾಡಲಾಗುತ್ತದೆ. ಕಾಲೇಜು ವಿದ್ಯಾರ್ಥಿಗಳ ಹಂತಕ್ಕೆ ಬಂದರೆ ಇಂತಹ ಯಾವುದೇ ಕಾರ್ಯಕ್ರಮ ಇಲ್ಲದೆ ಕೇವಲ ರಜೆ ಘೋಷಣೆಯಷ್ಟರಲ್ಲಿಯೇ ಕಳೆಯುತ್ತದೆ. ಇನ್ನು ಸರ್ಕಾರಿ ಕಛೇರಿಗಳಲ್ಲಿ ಕಡ್ಡಾಯವಾಗಿ ಪಾಲಿಸಲೇಬೇಕಾದ ಧ್ವಜಾರೋಹಣ ಕಾರ್ಯದೊಂದಿಗೆ ಅಂದಿನ ಕಾರ್ಯಕ್ರಮಕ್ಕೆ ಮುಕ್ತಾಯವಷ್ಟೆ. ಆದರೆ, ಪ್ರಪಂಚದಾದ್ಯಂತ ಈ ನಮ್ಮ ಗಣರಾಜ್ಯ ದಿನಾಚರಣೆಯು ಯಾವ ರೀತಿಯಲ್ಲಿ ತನ್ನದೇ ವೈಶಿಷ್ಟ್ಯವನ್ನು ಹೊಂದಿದೆಯೆಂಬುದರ ವಿವರವನ್ನು ಬಹುತೇಕ ಯಾವ ಶಾಲೆಯಲ್ಲಿಯೂ ಹೇಳುವುದಿಲ್ಲ. ಅವೆಲ್ಲವನ್ನು ತಿಳಿಯುವುದರಿಂದ ಮಕ್ಕಳಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸಿ ದೇಶಭಕ್ತರನ್ನಾಗಿಸಲು ಸಹಕಾರಿಯಾಗುವುದೆಂಬುದು ಇಲ್ಲಿ ಗಮನಿಸಬೇಕಾದ ಅತಿಮುಖ್ಯ ಅಂಶವಾಗಿದೆ.

ಭಾರತದ ಪ್ರಜಾಪ್ರಭುತ್ವ ನೀತಿಯು ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಎಂಬ ಮೂರು ಪ್ರಮುಖ ಅಂಗಗಳ ಮೂಲಕ ಕಾರ್ಯನಿರ್ವಹಿಸುವುದನ್ನು ಸದಾ ನೆನಪು ಮಾಡುವ ಮತ್ತು ಈ ಆಡಳಿತ ವ್ಯವಸ್ಥೆಗೆ ಸಹಕಾರ ನೀಡುತ್ತ ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಳ್ಳಲು ಅಗತ್ಯವಾದ ಶಕ್ತಿಸಾಮರ್ಥ್ಯವಿರುವುದನ್ನು ಪ್ರದರ್ಶಿಸುವ ಪ್ರಮುಖವಾದ ಕಾರ್ಯಕ್ರಮವು ಈ ದಿನದಂದು ರಾಷ್ಟ್ರರಾಜಧಾನಿಯಲ್ಲಿ ನಡೆಯುತ್ತದೆ. ಅದೇ ವರ್ಣರಂಜಿತವೂ, ವೈವಿಧ್ಯಮಯವೂ ಆದ 'ಪಥಸಂಚಲನ'ದ ಆಯೋಜನೆ. ಅದರಲ್ಲಿ ನಮ್ಮ ಇತ್ತೀಚಿನ ಅತ್ಯುತ್ತಮ ಮತ್ತು ಯಶಸ್ವೀ ಯುದ್ಧಯಂತ್ರಗಳು ಹಾಗೂ ಎಲ್ಲ ಬಗೆಯ ಫಿರಂಗಿಗಳನ್ನು, ಆಯುಧ ಸಾಮರ್ಥ್ಯವನ್ನು ಪ್ರದರ್ಶಿಸುವುದರೊಂದಿಗೆ ಪ್ರತಿಯೊಂದು ರಾಜ್ಯದ ಸಾಂಸ್ಕೃತಿಕ ವೈಭವದ ಪರಿಚಯವನ್ನು ಮಾಡಿಸಲಾಗುತ್ತದೆ. ದೇಶದ ಪ್ರಗತಿಯ ಒಂದು ಸ್ಥೂಲಚಿತ್ರಣವನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಗಣ್ಯರ ಎದುರಿಗೆ ಪ್ರದರ್ಶಿಸುವ ಈ ಕಾರ್ಯಕ್ರಮದಲ್ಲಿ, ನಡೆದಿರುವ ಎಲ್ಲ ಅಭಿವೃದ್ಧಿ ಕಾರ್ಯಗಳು ಗಮನ ಸೆಳೆಯುತ್ತವೆ. ವೈವಿಧ್ಯಮಯವಾದ ನಮ್ಮ ಸಂಸ್ಕೃತಿ ಸಂಪತ್ತು ಒಂದೇ ಭಾವಣಿಯಡಿಯಲ್ಲಿ ಮಡುಗಟ್ಟಿರುವುದನ್ನು, ದೇಶದ ಸಾಮರ್ಥ್ಯವನ್ನು ಕಂಡಾಗ ನಮ್ಮ ದೇಶದ ಬಗೆಗೆ ಅಪಾರ ಭರವಸೆ ಮತ್ತು ಹೆಮ್ಮೆಯುಂಟಾಗುತ್ತದೆ. ಅಷ್ಟೇ ಅಲ್ಲ, ನಾವೆಲ್ಲರೂ ಮತ್ತಷ್ಟು ಪ್ರಗತಿಯ ಹಾದಿಯಲ್ಲಿ ಮುಂದಿನ ಹೆಜ್ಜೆಯನ್ನಿಡಲು ಒಂದು ಉತ್ತಮ ವೇದಿಕೆಯನ್ನೂ ಸೃಷ್ಟಿಸುತ್ತದೆ.

'ಪಥಸಂಚಲನ' ಎಂಬ ಕಾರ್ಯಕ್ರಮದಲ್ಲಿ ಭಾರತೀಯ ಸೈನ್ಯದ ಸುಮಾರು ಹನ್ನೆರಡು ಬೇರೆ ಬೇರೆ ಸೇನಾಪಡೆಗಳಲ್ಲದೆ ನೌಕಾಪಡೆ ಮತ್ತು ವಾಯುದಳಗಳ ತಂಡಗಳು ತಮ್ಮೆಲ್ಲ ಅಧಿಕೃತ ವೇಷಭೂಷಣಗಳೊಂದಿಗೆ ಹೆಜ್ಜೆಹಾಕುತ್ತಾ ಭಾರತದ ಶಸ್ತ್ರಬಲದ, ರಕ್ಷಣಾ ಸಾಮರ್ಥ್ಯದ ದರ್ಶನ ಮಾಡಿಸುತ್ತಾ ದೇಶದ ಶಸ್ತ್ರಬಲದ ಕಮಾಂಡರ್ ಇನ್ ಚೀಫ್ ಆದ ರಾಷ್ಟ್ರಪತಿಯವರಿಗೆ ವಂದನೆ ಸಲ್ಲಿಸುತ್ತಾರೆ. ಅವರೆಲ್ಲರೊಂದಿಗೆ ದೇಶದ 12 ಅರೆಸೇನಾ ತುಕಡಿಗಳು ಮತ್ತು ಇತರ ನಾಗರಿಕ ಸೇವಾತಂಡಗಳು ಕೂಡ ಈ ಪಥಸಂಚಲನದಲ್ಲಿ ಹೆಜ್ಜೆಹಾಕುತ್ತವೆ. ದೇಶದ ಎಲ್ಲ ಭಾಗಗಳಿಂದ ಆಯ್ದ ಮತ್ತು ಸತತ ತರಬೇತಿ ಹೊಂದಿದ ತಂಡಗಳು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅವರೆಲ್ಲ ಇಡೀ ದೇಶದ ಗಮನವನ್ನು ಸೆಳೆಯಲು ಸಡಗರದಿಂದ ಸಿದ್ಧರಾಗಿರುತ್ತಾರೆ.

ಈ ವೈಭವದ ಗಣರಾಜ್ಯ ದಿನಾಚರಣೆ ಜಗತ್ಪ್ರಸಿದ್ಧ. ಪ್ರತಿಬಾರಿ ಈ ಉತ್ಸವಕ್ಕೆ ವಿದೇಶೀ ಗಣ್ಯರನ್ನು ಅತಿಥಿಗಳಾಗಿ ಆಹ್ವಾನಿಸುವ ಸಂಪ್ರದಾಯವಿದೆ. ಹೀಗೆ ಆಮಂತ್ರಣದ ಗೌರವಕ್ಕೆ ಪಾತ್ರವಾಗುವ ರಾಷ್ಟ್ರಗಳನ್ನು ಆಯ್ಕೆಮಾಡುವಾಗ ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. 1950ರಿಂದಲೂ ಪ್ರತಿವರ್ಷ ಈ ಕ್ರಮವನ್ನನುಸರಿಸಿ ವಿದೇಶಿವೊಂದರ ಪ್ರಮುಖರನ್ನು ಅಥವಾ ರಾಜ್ಯವೊಂದರ ಮುಖ್ಯಸ್ಥರನ್ನು ಆಹ್ವಾನಿಸಿ ಅತಿಥಿಸತ್ಕಾರ ಮಾಡಲಾಗುತ್ತದೆ. ಅವರೆದುರಿಗೆ ರಾಷ್ಟ್ರ ಮತ್ತು ರಾಜ್ಯದ ಅಭಿವೃದ್ಧಿಕಾರ್ಯಗಳು ಹಾಗೂ ಸಾಂಸ್ಕೃತಿಕ ಸಂಪತ್ತನ್ನು ಪ್ರದರ್ಶಿಸುವುದರಿಂದ ಅವರೆಲ್ಲರ ದೃಷ್ಟಿಯಲ್ಲಿ ದೇಶದ ಹಿರಿಮೆಯ ಬಗ್ಗೆ ಅರಿವು ಮೂಡಿಸಿದಂತಾಗುತ್ತದೆ.

ಅತ್ಯಾಕರ್ಷಕ ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹುತಾತ್ಮಯೋಧರಿಗೆ ಶ್ರದ್ಧಾಂಜಲಿ ಅರ್ಪಣೆ, ವಿಪತ್ತಿನ ಸಂದರ್ಭಗಳಲ್ಲಿ ಧೈರ್ಯ ಪ್ರದರ್ಶಿಸಿ ಸಾಹಸ ಕಾರ್ಯಗಳನ್ನು ಮಾಡಿದ ಸೇನೆಯ ವ್ಯಕ್ತಿಗಳಿಗೆ, ನಾಗರಿಕರಿಗೆ ಮತ್ತು ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಿ ಪ್ರೋತ್ಸಾಹಿಸುವ ಸಮಾರಂಭಗಳೂ ನಡೆಯುತ್ತವೆ. ಈ ಉತ್ಸವದ ಮತ್ತೊಂದು ಆಕರ್ಷಣೆ ಮಿಲಿಟರಿಯ ಮೂರೂ ವಿಭಾಗಗಳ ಬ್ಯಾಂಡ್‌ಸೆಟ್‌ನವರು ನಡೆಸಿಕೊಡುವ 'ಬೀಟಿಂಗ್ ರಿಟ್ರೀಟ್'.

ಗಣರಾಜ್ಯೋತ್ಸವವನ್ನು ಇಷ್ಟು ವಿಜೃಂಭಣೆಯಿಂದ ನಡೆಸುತ್ತಾ ಜಗತ್ತಿನ ಗಮನವನ್ನು ಸೆಳೆಯುವ ಭಾರತವು ಹೆಮ್ಮೆಪಡಬೇಕಾದ ಮತ್ತೊಂದು ಅಂಶವೆಂದರೆ ಜಗತ್ತಿನ ಮೊಟ್ಟಮೊದಲ ಗಣತಂತ್ರವೆಂಬ ಹೆಗ್ಗಳಿಕೆಯನ್ನು ನಮ್ಮ ದೇಶದ ವೈಶಾಲಿಯೆಂಬ

ಪುಟ 9 ಕ್ಕೆ ➢

# 'ಚಿತ್ತಗಾಂಗ್'ನಲ್ಲೊಂದು ಸ್ವಾತಂತ್ರ್ಯ 'ಸೂರ್ಯ'ನ ಉದಯ

**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



'ಚಿತ್ತಗಾಂಗ್' ಅನ್ನೋ ಹೆಸರು ಕೇಳಿದರೆ ಸಾಕು, ಸ್ವಾತಂತ್ರ್ಯ ಇತಿಹಾಸವನ್ನು ಓದಿದ ಪ್ರತಿಯೊಬ್ಬರಿಗೂ ಮೈನವಿರೇಳುತ್ತದೆ. ಅಂಥಾ ಚಮತ್ಕಾರ ನಡೆದ ಸ್ಥಳ ಅದು. ಕ್ರಾಂತಿಕಾರಿಗಳ, ದೇಶಪ್ರೇಮಿಗಳ ಪುಣ್ಯಕ್ಷೇತ್ರವದು. ದೇಶ ವಿಭಜನೆಯಾದ ಮೇಲೆ, ಈಗ ಈ ಜಾಗ 'ಬಾಂಗ್ಲಾದೇಶ'ದಲ್ಲಿದೆ.

ಅವನ ಹೆಸರು 'ಸೂರ್ಯಸೇನ್'. ವೃತ್ತಿಯಿಂದ ಶಿಕ್ಷಕ. ಎಲ್ಲ ವಿದ್ಯಾರ್ಥಿಗಳ ಪ್ರೀತಿಯ 'ಮಾಸ್ಟರ್ ದಾ'. ಹುಟ್ಟಿದ್ದು ನೌಪರ ಎಂಬ ಗ್ರಾಮದಲ್ಲಿ, 1894 ರಲ್ಲಿ. ಅದಾಗಲೇ, ಬಂಗಾಳದ ಪ್ರಸಿದ್ಧ ಕ್ರಾಂತಿಕಾರಿ ಸಂಘಟನೆಗಳಾದ 'ಅನುಶೀಲನ ಸಮಿತಿ' ಮತ್ತು 'ಜುಗಾಂತರ'ದಿಂದ ಪ್ರಭಾವಿತನಾಗಿದ್ದ. ಭಾರತದ ಸ್ವಾತಂತ್ರ್ಯ, ಚಿತ್ತಗಾಂಗ್ ಗ್ರಾಮದಿಂದಲೇ ಪ್ರಾರಂಭವಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ. ಅದಕ್ಕಾಗಿ ಮಾಸ್ಟರ್ ದಾ, ಸಂಘಟನೆಯನ್ನೂ ಶುರು ಮಾಡಿದ್ದರು. ಶಾಲೆಯಲ್ಲಿನ, ಕೇವಲ 14–15 ವರ್ಷದೊಳಗಿನ ಪುಟ್ಟ ವಿದ್ಯಾರ್ಥಿಗಳೂ ಸೂರ್ಯಸೇನನ ಜೊತೆ ಸಹಕರಿಸಲು ಮುಂದೆ ಬಂದರು. ಸುಮಾರು 60 ವಿದ್ಯಾರ್ಥಿಗಳ ದೊಡ್ಡ ಸೈನ್ಯವೇ ತಯಾರಾಯ್ತು. ಗಣೇಶ್ ಘೋಶ್, ಅನಂತ ಸಿಂಹ, ನಿರ್ಮಲ್ ಸೇನ್, ಲೋಕನಾಥ ಬಲ್, ಅಂಬಿಕಾ ಚಕ್ರವರ್ತಿ, ಪ್ರೀತಿಲತಾ ವದ್ದೆದಾರ್, ಕಲ್ಪನಾ ದತ್ತ ಇವರ ಮುಂದಾಳತ್ವದಲ್ಲಿ ಅನೇಕ ಪಡೆಗಳನ್ನು ಸೂರ್ಯಸೇನ್ ರಚಿಸಿದ. ಹರಿಗೋಪಾಲ್ ಬಲ್, ದೇವಪ್ರಸಾದ್ ಗುಪ್ತಾ, ಆನಂದಪ್ರಸಾದ ಗುಪ್ತಾ, ಹರಿಪಾದ ಚಕ್ರವರ್ತಿ, ಜಿಬನ್ ಘೋಶಾಲ್ ಮುಂತಾದ ಉತ್ಸಾಹಿ ತರುಣರು ಆ ಪಡೆಗಳಲ್ಲಿದ್ದರು. ಪ್ರತಿ ಪಡೆಗೂ ಒಂದೊಂದು ಕೆಲಸ ನೀಡಲಾಯಿತು.

ಅದು ಎಪ್ರಿಲ್ 18 – 1930. ಸೂರ್ಯಸೇನನ ಪ್ಲಾನಿನಂತೆ ಅವತ್ತು ರಾತ್ರಿ 10 ಗಂಟೆಗೆ ಸರಿಯಾಗಿ, ಒಮ್ಮೆಲೇ ಚಿತ್ತಗಾಂಗ್‌ನ ಎಲ್ಲ ಆಂಗ್ಲ ಕಛೇರಿಗಳ ಮೇಲೆ ದಾಳಿ ಮಾಡಲಾಯಿತು. ಪೂರ್ವ ಯೋಜಿತದಂತೆ, ಗಣೇಶ್ ಘೋಶನ ತಂಡ ಪೋಲಿಸ್ ಶಸ್ತ್ರಾಗಾರವನ್ನು ವಶಪಡಿಸಿಕೊಂಡರೆ, ಲೋಕನಾಥನ ತಂಡ 'ಅರೆಸೈನ್ಯ'ದ ಶಸ್ತ್ರಾಗಾರಕ್ಕೆ ಮುತ್ತಿಗೆ ಹಾಕಿತು. ಅಂಬಿಕಾ ಚಕ್ರವರ್ತಿಯ ಜೊತೆಗಾರರು, ಚಿತ್ತಗಾಂಗ್ ಗೆ ಕೂಡುವ ಎಲ್ಲ ರೈಲ್ವೆ ಮಾರ್ಗವನ್ನು ಭಗ್ನಗೊಳಿಸಿದರು. ನಿರ್ಮಲ್ ಸೇನ್ ಟೆಲಿಗ್ರಾಫ್ ಸಂಪರ್ಕವನ್ನು ಕಡಿತಗೊಳಿಸಿದ. ಈ ಎಲ್ಲ ಕಾರ್ಯಗಳ ನಂತರ, ಸೂರ್ಯಸೇನನ ನಾಯಕತ್ವದಲ್ಲಿ, ಪೋಲಿಸ್ ಶಸ್ತ್ರಾಗಾರದ ಮುಂದೆ ಎಲ್ಲರೂ ಸೇರಿ, ಅಲ್ಲೇ ಭಾರತದ ಬಾವುಟ ಹಾರಿಸಿ, 'ವಂದೇ ಮಾತರಂ' ಹೇಳಿ, ಚಿತ್ತಗಾಂಗ್ ಸ್ವತಂತ್ರ ಎಂದು ಘೋಷಿಸಲಾಯಿತು.

ಬ್ರಿಟಿಷರಿಗೆ ಗುಪ್ತಚರರಿಂದ, ಚಿತ್ತಗಾಂಗ್‌ನ ಕ್ರಾಂತಿಯ ಬಗ್ಗೆ ತಿಳಿದು ತಪಾಸಣೆ ಆರಂಭಿಸಿದರು. ಬ್ರಿಟಿಷರ ವಾಸನೆ ಬಡಿಯುತ್ತಿದ್ದಂತೆ, ಚಿತ್ತಗಾಂಗ್‌ನ ಪರ್ವತಶ್ರೇಣಿಗಳಲ್ಲಿ ಕ್ರಾಂತಿಕಾರಿಗಳು ಅಡಗಿಕೊಂಡರು. ಅದರ ಸುಳಿವನ್ನು ಹಿಡಿದು ಬೆನ್ನುಹತ್ತಿದ ಆಂಗ್ಲರು, ಇಡೀ ಆ ಪರ್ವತವನ್ನು ಸುತ್ತುವರೆದರು. ಸುಮಾರು 80 ಬ್ರಿಟಿಷ್ ಪಡೆಗಳ ಜೊತೆಗೆ, ಆ ಪುಟ್ಟ ವಿದ್ಯಾರ್ಥಿಗಳ ಪಡೆ ಗುಂಡಿನ ದಾಳಿ ನಡೆಸಿತು. 12 ಜನ ಆ ಹೋರಾಟದಲ್ಲಿ ಮೃತರಾದರು. ಕೆಲವರು ಕಲ್ಕತ್ತೆಗೆ ಓಡಿಹೋದರು. ಸೂರ್ಯಸೇನ್ ಮಾತ್ರ ವೇಷಮರೆಸಿಕೊಂಡಿದ್ದ..!

ಇದಾದ ಮೇಲೆ, ಅಜ್ಞಾತ ಮನೆಯೊಂದರಲ್ಲಿ ಅಡಗಿದ್ದಾಗ, ಬ್ರಿಟಿಷರ ದಾಳಿಗೆ 'ನಿರ್ಮಲ್ ಸೇನ್'ಬಲಿಯಾದ. ನಂತರ ಪ್ರೀತಿಲತಾ, ಊರಿನ 'ಯುರೋಪಿಯನ್ ಕ್ಲಬ್' ಮೇಲೆ ದಾಳಿ ನಡೆಸಿ, ತಾನೂ ಹುತಾತ್ಮಳಾದಳು. ಆದರೂ ಕೊನೆಗೆ, ನೇತ್ರಸೇನ್ ಎಂಬ ದ್ರೋಹಿಯು ಕಾರಣದಿಂದ, ಸೂರ್ಯಸೇನ್ ಬಂಧಿತನಾಗಿಬಿಟ್ಟ. ಆ ಸಿಟ್ಟಿಗೆ, ಉಳಿದ ಕ್ರಾಂತಿ ಯುವಕರು ಆ ಮನೆಮುರುಕನನ್ನು ಕೊಂದು, ದೇಶದ್ರೋಹಕ್ಕೆ ಸಾವೇ ಶಿಕ್ಷೆ ಅನ್ನೋದನ್ನ ತೋರಿಸಿದರು. ಬಂಧಿತ ಸೂರ್ಯಸೇನನ ವಿಚಾರಣೆ ನಡೆದು, ಅವನಿಗೆ ಮತ್ತು ಜುಗಾಂತರ ಪಾರ್ಟಿಯ "ತಾರಕೇಶ್ವರ ದಸ್ತಿದಾರ್' ಇಬ್ಬರಿಗೂ ಗಲ್ಲು ಶಿಕ್ಷೆ ಪ್ರಕಟಿಸಲಾಯಿತು. ಆದರೆ, ಗಲ್ಲಿಗೇರಿಸುವುದಕ್ಕಿಂತ ಮುಂಚೆ, ಸೂರ್ಯಸೇನನನ್ನು ಅಮಾನುಷವಾಗಿ ಬ್ರಿಟಿಷರು ಹಿಂಸಿಸಿದರು. ಹ್ಯಾಮರ್‌ನಿಂದ ಅವನ ಹಲ್ಲುಗಳನ್ನು ಒಡೆದರು. ಕಟಿಂಗ್ ಪ್ಲೇಯರ್‌ನಿಂದ ಅವನ ಉಗುರುಗಳನ್ನು ಕೀಳಲಾಯಿತು. ತೊಡೆಯ ಸಂದಿಗಳಲ್ಲಿ ತಿವಿದರು. ಕೈಕಾಲಿನ ಕೀಲುಗಳನ್ನು ಮುರಿದರು. ಇಂಥಾ ಹಿಂಸೆಯಿಂದ ಮೂರ್ಛೆ ಹೋಗಿದ್ದ ಸೂರ್ಯಸೇನನನ್ನು ಅನಾಮತ್ತಾಗಿ ಎಳೆದುಕೊಂಡು ಬಂದು ನೇಣಿಗೇರಿಸಿದರು.

ಸಾವಿಗೂ ಮುಂಚೆ, ಆತ ತನ್ನ ಯುವಕರಿಗೆ ಪತ್ರವೊಂದನ್ನು ಬರೆದಿದ್ದ.. "ಸಾವು ನನ್ನನ್ನು ಆಲಂಗಿಸುತ್ತಿದೆ.. ಆ ಅನಂತದೆಡೆಗೆ ನಾನು ಹೊರಟಿದ್ದೇನೆ.. ಮಾತೃಭೂಮಿಗೆ ಪ್ರಾಣ ಕೊಡುತ್ತಿರುವ ಈ ಸೌಭಾಗ್ಯದ ಸಂದರ್ಭದಲ್ಲಿ, ನಾನು ನಿಮಗೆ ನೀಡುವ ಆದೇಶ ಒಂದೇ. ಅದು ನನ್ನ ದೇಶದ "ಸ್ವರಾಜ್ಯ"ದ ಕನಸು. ಚಿತ್ತಗಾಂಗ್‌ನ ಕ್ರಾಂತಿಯನ್ನು ಎಂದಿಗೂ ಮರೆಯಬೇಡಿ.. ನಿಮ್ಮ ಮನದಲ್ಲಿ, ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಎಲ್ಲ ವೀರರ ಹೆಸರನ್ನು ರಕ್ತದಲ್ಲಿ ಬರೆದುಕೊಳ್ಳಿರಿ.. ಮತ್ತು ಸ್ವಾತಂತ್ರ್ಯ ಸಿಗೋವರೆಗೂ ಹೋರಾಟ ನಿಲ್ಲಿಸದಿರಿ.."

ಸೂರ್ಯಸೇನನ ಅಣತಿಯಂತೆ ಅವನ ಶಿಷ್ಯರೆನೋ, ಹುತಾತ್ಮರ ಹೆಸರನ್ನು ಸ್ಮರಿಸಿ, ಅದರಂತೆ ಹೋರಾಡಿ ದೇಶವನ್ನು ಬಿಡುಗಡೆಗೊಳಿಸಿದರು. ಆದರೆ, ನಾವು ನಮ್ಮ ಹೃದಯದಾಳದಲ್ಲಿ, ಆ ತ್ಯಾಗಮಯಿಗಳ ಹೆಸರನ್ನು ಬರೆದುಕೊಳ್ಳಲೆ ಇಲ್ಲವಲ್ಲ. ಜನವರಿ 12 ಸೂರ್ಯಸೇನ ಹುತಾತ್ಮನಾದ ದಿನ. ಇನ್ನಾದರೂ ಅವರ ತ್ಯಾಗವನ್ನು ಸ್ಮರಿಸಿ, ಆ ವೀರಚೇತನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸೋಣ. **ವಂದೇ ಮಾತರಂ..**

➢ ಪುಟ 7 ರಿಂದ..... ಗಣರಾಜ್ಯ ದಿನ...

ನಗರವು (ಇಂದಿನ ಬಿಹಾರದಲ್ಲಿದೆ) ಪಡೆದುಕೊಂಡಿರುವುದು. 6ನೇ ಶತಮಾನದಲ್ಲಿಯೇ ಅಂದರೆ ಗೌತಮಬುದ್ಧನ ಜನನಕ್ಕಿಂತಲೂ ಹಿಂದೆಯೇ ವೈಶಾಲಿ ಮಹಾನಗರವು ಗಣತಂತ್ರ ಪದ್ಧತಿಯನ್ನು ಆಚರಣೆಗೆ ತಂದುಕೊಂಡಿತ್ತು. ಅದು ಮಿಥಿಲೆಯ ವಜ್ಜಿ ಒಕ್ಕೂಟದ ಪ್ರದೇಶಗಳ ರಾಜಧಾನಿಯಾಗಿತ್ತು. ಅದು ಇಂದಿನ ಬಿಹಾರದ ಹಿಮಾಲಯ, ಗಂಗಾನದಿಯ ಪರಿಸರದ ಪ್ರದೇಶಗಳ ಬಹುಭಾಗವನ್ನು ಆವರಿಸಿಕೊಂಡಿತ್ತು. ಇದಲ್ಲದೆ 6ನೇ ಶತಮಾನದಲ್ಲಿಯೇ ಉತ್ತರ ಭಾರತದ ಬಹುತೇಕ ರಾಜ್ಯಗಳು ರಾಜರ ಆಳ್ವಿಕೆಯುಲ್ಲಿರದೆ ಗಣತಂತ್ರ ಪದ್ಧತಿ ಅಥವಾ ಮಿತಜನತಂತ್ರ ಪದ್ಧತಿಯನ್ನು ಅನುಸರಿಸುತ್ತಿದ್ದವೆಂದು ತಿಳಿದುಬರುತ್ತದೆ. ಪ್ರಮುಖವಾಗಿ ಕಪಿಲವಸ್ತುವಿನ ಶಾಕ್ಯರು, ವೈಶಾಲಿಯ ಲಿಚ್ಛವಿಗಳು, ಪಾವದ ಮಲ್ಲರು, ಕುಶಿನಾರದ ಮಲ್ಲರು, ರಾಮಗ್ರಾಮದ ಕೊಲಿಯರು ಮತ್ತು ಸಂಸಮಗಿರಿಯ ಭಾಗ್ಯ ಸಮುದಾಯದವರು ಈ ಬಗೆಯ ಆಡಳಿತ ಕ್ರಮವನ್ನು ಹೊಂದಿದ್ದರು.

ಆದರೆ, ಈ ಎಲ್ಲ ಕಡೆಗಳಲ್ಲಿ ಗಣತಂತ್ರಪದ್ಧತಿಯು ವಿದ್ವಾಂಸರ, ಪಂಡಿತರ ಸಮ್ಮಿತಿಯನ್ನು ಹೊಂದಿದ್ದರೂ ಒಮ್ಮತದ ಏಕರೂಪತೆ ಇರಲಿಲ್ಲ. ಅವರವರ ಸಂಘಟನೆಗಳ ಅನುಕೂಲಗಳಿಗೆ ತಕ್ಕಂತೆ ಅನೇಕ ವಿಭಾಗಗಳನ್ನು ಮಾಡಿಕೊಂಡಿದ್ದರು. ಚುನಾವಣೆಯ ಕ್ರಮದ ಕುರಿತಾಗಲೀ, ಮತದಾರರ ಅರ್ಹತೆಯ ಬಗೆಗಾಗಲೀ ಎಲ್ಲರ ಅಭಿಪ್ರಾಯಗಳು ಒಂದೇ ರೀತಿ ಇರಲಿಲ್ಲ. ವೈಶಾಲಿಯ ಲಿಚ್ಛವಿಗಳು ಅನುಸರಿಸುತ್ತಿದ್ದ ಪದ್ಧತಿಯ ಕುರಿತು ಕೆಲವು ಬೌದ್ಧ ಮೂಲಗಳಲ್ಲಿ ತಿಳಿದುಬರುವ ಅಂಶವೆಂದರೆ ಪ್ರತಿಯೊಬ್ಬ ವಯಸ್ಕನೂ ಆಡಳಿತ ಕಾರ್ಯದಲ್ಲಿ ತೊಡಗಿಸಿಕೊಳ್ಳ ಬಲ್ಲವನಾಗಿದ್ದನೆಂದೂ ಮತ್ತೊಂದು ಮಾಹಿತಿಯ ಪ್ರಕಾರ ಕೇವಲ ಕ್ಷತ್ರಿಯ ಜನಾಂಗದವರಿಗೆ ಮಾತ್ರ ಅಂತಹ ಅಧಿಕಾರವಿತ್ತೆಂದು ತಿಳಿದುಬಂದರೆ, ಇನ್ನೊಂದು ಮೂಲದಲ್ಲಿ ಅವಿಭಕ್ತ ಕುಟುಂಬಗಳ ಮುಖ್ಯಸ್ಥರನ್ನು ಮಾತ್ರ ಆಡಳಿತದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿತ್ತೆಂದು ತಿಳಿಯುತ್ತದೆ.

ಮತ್ತೊಬ್ಬ ಇತಿಹಾಸಕಾರರ (ಡಾ॥ ಜಯಸ್ವಾಮಿ) ಅಭಿಪ್ರಾಯದಲ್ಲಿ ಈ ಗಣತಂತ್ರ ಆಡಳಿತ ಕ್ರಮದಲ್ಲಿ ಮೂರು ವಿಭಾಗಗಳಿದ್ದವು.

1. ಪ್ರಜಾಪ್ರಭುತ್ವ ಅಥವಾ ಸಂಪೂರ್ಣವಾಗಿ ಕೇವಲ ಗಣ ಅಂದ್ರೆ ಎಲ್ಲ ವಯಸ್ಕರೂ ಆಡಳಿತದ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಅಧಿಕಾರವಿರುತ್ತಿತ್ತು.
2. ಶ್ರೀಮಂತರ ಅಧಿಕಾರ ಅಥವಾ ಕೇವಲ ಕುಲೀನರು ಅಂದರೆ ಕೆಲವೇ ಆಯ್ದ ಕುಟುಂಬಗಳು ಪಾಲ್ಗೊಳ್ಳಬಹುದಾಗಿತ್ತು.
3. ಶ್ರೀಮಂತರು ಮತ್ತು ಸಾಮಾನ್ಯರು ಎರಡರ ಸಂಯೋಗ. ಪರಸ್ಪರ ಸಹಯೋಗದಲ್ಲಿ ಆಡಳಿತ ನಿರ್ವಹಣೆ.

ಮತ್ತೊಬ್ಬ ಇತಿಹಾಸಕಾರರ ಅಭಿಪ್ರಾಯದಲ್ಲಿ (ಡಾ॥ ಭಂಡಾರಕರ್) ಈ ರಾಜ್ಯಗಳಲ್ಲಿ ಮುಖ್ಯವಾಗಿ ಎರಡು ರೀತಿಗಳಲ್ಲಿ ಗಣತಂತ್ರ ಕ್ರಮವಿರುತ್ತಿತ್ತು. ಸಾದಾ ಗಣರಾಜ್ಯ ಮತ್ತು ಶ್ರೀಮಂತ ಕ್ಷತ್ರಿಯರಿಂದ ನಿರ್ವಹಿಸುತ್ತಿದ್ದುದು ಎಂಬ ವಿಭಾಗಗಳು.

ಒಟ್ಟಾರೆ ಈ ಎಲ್ಲ ಅಂಶಗಳು ಅಂದರೆ ನಮ್ಮಲ್ಲಿದ್ದ ಪ್ರಾಚೀನ ಗಣತಂತ್ರದ ಒಂದು ಕಿರುನೋಟವನ್ನು ನೀಡುವುದರಿಂದ ಬಹಳ ಹಿಂದಿನಿಂದಲೇ ಇದ್ದ ಗಣತಂತ್ರ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಆಡಳಿತದ ಚಟುವಟಿಕೆಗಳಲ್ಲಿ ಸಾಮಾನ್ಯ ಜನರೂ ಜವಾಬ್ದಾರಿಯ ಪಾತ್ರವನ್ನು ವಹಿಸುತ್ತಿದ್ದರೆಂಬುದನ್ನು ತಿಳಿಸುತ್ತದೆ. ಜೊತೆಗೆ ಪ್ರಪಂಚಕ್ಕೇ ಈ ಗಣರಾಜ್ಯವೆಂಬುದರ ಪರಿಕಲ್ಪನೆಯನ್ನು ನೀಡುತ್ತ ಪ್ರಾಯೋಗಿಕವಾಗಿಯೂ ಯಶಸ್ವಿಯಾಗಿ ರೂಪಿಸಿದ ಭಾರತೀಯರು ನಾವು ಎಂಬ ಹೆಮ್ಮೆಯ ಅಂಶವೂ ತಿಳಿಯುತ್ತದೆ.

●

➢ ಪುಟ 4 ರಿಂದ..... ಸಮರ್ಥ ಭಾರತ...

ಜನವರಿ19ರಂದು ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಬೆಂಗಳೂರಿನ ರಾಮಕೃಷ್ಣಮಠದ ಸ್ವಾಮಿಜಿ ರಘುರಾಮಾನಂದ ಜಿ ಮಹಾರಾಜ್‌ರವರು, ಖ್ಯಾತ ದಂತ ವೈದ್ಯರಾದ ಡಾ॥ ಗಿರೀಶ್ ರಾವ್ ಹಾಗೂ ಹೆಣ್ಣುಮಕ್ಕಳ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀಮತಿ ಮಾಲಾ ಅತಿಥಿಗಳಾಗಿ ಪಾಲ್ಗೊಂಡು ಪ್ರತಿಷ್ಠಾನದ ಪ್ರಯತ್ನವನ್ನು ಶ್ಲಾಘಿಸಿ ವಿದ್ಯಾರ್ಥಿಗಳು ಭಾರತೀಯತೆಯ ಪರಿಚಯವನ್ನು ಪಡೆದುಕೊಂಡು ಭಾರತದ ಅಭಿವೃದ್ಧಿಗೆ ಶ್ರಮಿಸಬೇಕೆಂದು ಹಿತ ನುಡಿದರು. 'ವಿಶ್ವಮಾತೆ ಭಾರತಿ'ಗ್ರಂಥವನ್ನು ವಿದ್ಯಾರ್ಥಿಗಳಿಗೆ, ಯುವಕರಿಗೆ ಪರೀಕ್ಷೆಯ ಮೂಲಕ ಪರಿಚಯಿಸಲು ಆಸಕ್ತರಾದ ಶಿಕ್ಷಕರು, ಹೆಚ್ಚಿನ ಮಾಹಿತಿಗಾಗಿ ಪ್ರತಿಭಾ ವಿಕಾಸ ಪ್ರತಿಷ್ಠಾನ, ನಂ 1272, 23ನೇ ಮುಖ್ಯರಸ್ತೆ, 24ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು –560 070 ವಿಳಾಸವನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ 9482014280, 7026721999, 080 26718680.

●

**ಮನಸ್ಸು ಏಕಾಗ್ರವಾಗದಿದ್ದರೂ ಪವಿತ್ರ ನಾಮ ಜಪವನ್ನು ಮಾತ್ರ ಬಿಡಬೇಡ. ನಿನ್ನ ಕರ್ತವ್ಯವನ್ನು ನೀನು ಮಾಡು. ನಾಮ ಜಪ ಮಾಡುವಾಗ ಮನಸ್ಸು ಗಾಳಿಯಿಲ್ಲದ ಪ್ರದೇಶದಲ್ಲಿಟ್ಟ ದೀಪದಂತೆ ಅಲುಗಾಡದೆ ಸ್ಥಿರವಾಗಿರುವುದು. ದೀಪ ಅಲುಗಾಡುವಂತೆ ಮಾಡುವುದು ಗಾಳಿ. ಅದೇ ರೀತಿ ನಮ್ಮ ಬಯಕೆ, ವಾಸನೆಗಳು ಮನಸ್ಸನ್ನು ಚಂಚಲಗೊಳಿಸುವುವು.**

**– ಶ್ರೀಮಾತೆ ಶಾರದಾದೇವಿ**



**ಮೊದಲು ಆಳಾಗುವುದನ್ನು ಕಲಿಯಿರಿ. ಆಗ ನಾಯಕನ ಅರ್ಹತೆ ಬರುತ್ತದೆ.**

# ರಾಜಸ್ತಾನದ ಉದಯಪುರದಲ್ಲಿ ವಿಚಾರವರ್ಗ

ರಾಷ್ಟ್ರ ಎಂದರೆ ಸಮಾಜ. ಶಿಕ್ಷಕರಲ್ಲಿ ರಾಷ್ಟ್ರದ ಅವಧಾರಣೆಯನ್ನು ಸ್ಪಷ್ಟಪಡಿಸಬೇಕು. All are one ಎಂದು ಹೇಳದೇ All is one ಎಂದು ಹೇಳಬೇಕು. Each soul is potentially divine. The goal is to manifest this divinity…. By Swami Vivekanand ರವರ ಹೇಳಿಕೆಯನ್ನು ದಿನಾಂಕ 25.12.18 ಮತ್ತು 26.27/12/18 ಮೂರು ದಿನಗಳಂದು ರಾಜಸ್ತಾನದ ಉದಯಪುರದಲ್ಲಿ ನಡೆದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ವಿಚಾರವರ್ಗದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಮನಮೋಹನ್ ವೈದ್ಯಜೀಯವರು ಹೇಳಿದರು.

ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ. ಪರರು ಎಂದು ತಿಳಿದು ಉಪಕಾರ ಮಾಡದೇ, ನಮ್ಮವರು ಎಂದು ತಿಳಿದು ಉಪಕಾರವನ್ನು ಮಾಡಬೇಕೆಂದು ಹೇಳಿದರು.

ಮಹೇಂದ್ರಕುಮಾರ್‌ಜಿಯವರು ಶಿಕ್ಷಕರಿಗೆ ಸಿಗಬೇಕಾದ ಸೌಲಭ್ಯಗಳು, ಶಿಕ್ಷಕರಿಗೆ ಬೋಧನಾ ವಿಷಯದ ಬಗ್ಗೆ ಇರಬೇಕಾದ ಜ್ಞಾನದ ಬಗ್ಗೆ ತಿಳಿಸಿದರು. ಶಿಕ್ಷಕ ಹಾಗೂ ವಿದ್ಯಾರ್ಥಿಯ ಸಂಬಂಧದ ಬಗ್ಗೆ ತಿಳಿಸುತ್ತಾ ಸೂರ್ಯ ಮತ್ತು ಪೃಥ್ವಿಯ ಉದಾಹರಣೆಯನ್ನು ನೀಡಿದರು. ಸೂರ್ಯನ ಬೆಳಕಿನಿಂದ ಪೃಥ್ವಿಯಲ್ಲಿ ಜೀವನ ನಡೆಯುತ್ತದೆ. ಇದರ ಬದಲಾಗಿ ಪೃಥ್ವಿಯು ಸೂರ್ಯನಿಂದ ಬೇರೇನನ್ನು ಕೇಳುವುದಿಲ್ಲ. ಅಲ್ಲದೇ ಸೂರ್ಯನಾದರೂ ಪೃಥ್ವಿಯ ಮೇಲೆ ಆದಿಪತ್ಯವನ್ನು ಸ್ಥಾಪಿಸಲು ಇಷ್ಟಪಡುವುದಿಲ್ಲ ಎಂದು ಹೇಳುತ್ತಾ ಸೂರ್ಯನನ್ನು ಶಿಕ್ಷಕನಿಗೆ ಹಾಗೂ ಪೃಥ್ವಿಯನ್ನು ಶಿಕ್ಷಾರ್ಥಿಗೆ ಹೋಲಿಸಿದರು.

ಶಿಕ್ಷಕ ಸಾಮರ್ಥ್ಯದವನಾಗಿದ್ದು, ಒಳ್ಳೆಯ ಚರಿತ್ರೆ ಹೊಂದಿದವನಾಗಿದ್ದರೆ ಶಿಕ್ಷಣ ಕ್ಷೇತ್ರವನ್ನು ಬದಲಾಯಿಸಬಹುದು. ಶಿಕ್ಷಕ ವೇತನ ಭೋಗಿಯಾಗದೇ ಕರ್ಮಯೋಗಿಯಾಗಬೇಕು. ಇತ್ತೀಚಿಗೆ ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ ಮನೋಭಾವ ಕಡಿಮೆಯಾಗುತ್ತಿದೆ. ಶಿಕ್ಷಕ ಎಂದರೆ ಶಿಷ್ಟಾಚಾರ ಹೊಂದಿದವನು, ಕ್ಷಮಾಶೀಲ ಗುಣವುಳ್ಳವನಾಗಿದ್ದು ಕರ್ಮಯೋಗಿಯಾಗಿರಬೇಕು ಎಂದು ಅ.ಭಾ.ರಾ.ಶೈ. ಮಹಾಸಂಘದ ಅಧ್ಯಕ್ಷರಾದ ಸಿಂಘಾಲ್‌ಜೀಯವರು ಹೇಳಿದರು.

ಹನುಮಾನ್ ಸಿಂಗ್‌ಜೀ ರಾಥೋಡ್‌ರವರು ಅರ್ಬನ್ ನಕ್ಸಲಿಸಂ ಹೇಗೆ ನಡೆಯುತ್ತಿದೆ. ಬುದ್ಧಿಜೀವಿಗಳು ಎಂದು ತಮ್ಮನ್ನು ತಾವು ಕರೆದುಕೊಳ್ಳುವವರು ಸಮಾಜವನ್ನು ಹೇಗೆ ಅಡ್ಡದಾರಿಗೆ ತರಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು.

ಸಮಾರೋಪದಲ್ಲಿ ಉಪಸ್ಥಿತರಿದ್ದ ಮನಮೋಹನ್‌ಜೀ ವೈದ್ಯರವರು ವೈದ್ಯರ ಬಳಿ ಕೇವಲ ಅಸ್ವಸ್ಥರು ಮಾತ್ರ ಹೋಗುತ್ತಾರೆ. ಆದರೆ ಶಿಕ್ಷಕರ ಬಳಿ ಸ್ವಸ್ಥರು ಬರುತ್ತಾರೆ. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಶಿಕ್ಷಕ ಬೋಧನೆ ಮಾಡಬೇಕು. ಜೀವನ ಸಫಲಮಾಡಿಕೊಳ್ಳುವುದೇ ಜೀವನದ ಗುರಿಯಾಗಬಾರದು ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವುದು ಜೀವನದ ಪರಮ ಗುರಿಯಾಗಿರಬೇಕು. ನಿಮ್ಮೆಲ್ಲರ ಜೀವನ ಸಾರ್ಥಕವಾಗಲಿ ಎಂದು ಹಾರೈಸುತ್ತಾ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಲಾಯಿತು.

ಕರ್ನಾಟಕದಿಂದ ಅ.ಭಾ.ರಾ.ಶೈ.ಮಹಾಸಂಘದ ಮಹಾಮಂತ್ರಿಗಳಾದ ಶ್ರೀ ಶಿವಾನಂದ ಸಿಂದನಕೇರಾ, ಶ್ರೀ ಬಾಲಕೃಷ್ಣ ಭಟ್, ಕ.ರಾ.ಮಾ.ಶಿ.ಸಂಘದ ಕಾರ್ಯಧ್ಯಕ್ಷರಾದ ಶ್ರೀ ಅರುಣ್ ಶಹಾಪುರ್‌ರವರು, ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್ ಮತ್ತು ಶ್ರೀಮತಿ ಮಮತಾ ಡಿ. ಕೆ ಭಾಗವಹಿಸಿದ್ದರು. ದೇಶದ ಮೂಲೆ ಮೂಲೆಗಳಿಂದ ಸಂಘದ 80 ಪ್ರತಿನಿಧಿಗಳು ಭಾಗವಹಿಸಿದ್ದರು. ●

➢ ಪುಟ 6 ರಿಂದ..... ಸುಭಾಷ್‌ಚಂದ್ರ ಬೋಸ್...

ಪದವಿ ಸ್ವೀಕರಿಸಿದ ನಂತರ ಹಿಂದೆ ಸರಿಯುವುದು ಅನೈತಿಕ ಎಂಬ ಭಾವ. ಹೀಗೆ ಮನಸ್ಸು ಡೋಲಾಯಮಾನದಲ್ಲಿತ್ತು. ತಮ್ಮ ಅಣ್ಣನಿಗೆ 1921 ರ ಫೆಬ್ರವರಿ 16ರಂದು ಬರೆದ ಪತ್ರದಲ್ಲಿ **"ನನ್ನ ಕಲ್ಪನೆಯಲ್ಲಿ ತ್ಯಾಗ ಮಾಡಬಯಸುವವರು ಜೀವನದ ಆರಂಭದ ಹಂತದಿಂದಲೇ ಆ ಜಾಡಿನಲ್ಲಿ ಹೊರಡುವುದು ಉತ್ತಮ, ಸರಳ ಜೀವನ, ಉಚ್ಚ ವಿಚಾರ, ಧಾರ್ಮಿಕ ಅನುಭಾವ ಇವು ಮಹತ್ವದ್ದು. ಈ ಪ್ರವೃತ್ತಿಯ ನನ್ನಂತಹವನಿಗೆ ವಿದೇಶಿ ನೌಕರಶಾಹಿಗೆ ಅಧೀನನಾಗುವುದು ಹಿಡಿಸದು"**. ಸುಭಾಷರು ತಮ್ಮ ಐ.ಸಿ.ಎಸ್. ಹುದ್ದೆಗೆ ಪದವಿಯನ್ನು ತಿರಸ್ಕರಿಸಿ ಭಾರತಕ್ಕೆ ಹಿಂದಿರುಗಿದರು. ಆದರೆ ರಾಜಕೀಯ ವಲಯದಲ್ಲಿ ಐ.ಸಿ.ಎಸ್ ಪ್ರತಿಷ್ಠಿತ ಪದವಿಯನ್ನು ತಿರಸ್ಕರಿಸಿದ ಮೊದಲ ಭಾರತೀಯ ಎಂಬ ಪ್ರಶಂಸೆಗೆ ಪಾತ್ರರಾದರು.

ತಂದೆಯ ಆಜ್ಞಾಪಾಲನೆಗೆ ತಾವು ಇಂಗ್ಲೆಂಡಿಗೆ ಹೋಗಿ ಶಿಕ್ಷಣ ಪಡೆದರೂ, ವಿದೇಶೀ ಶಿಕ್ಷಣದ ಬಗ್ಗೆ **"ವಿದ್ಯಾರ್ಥಿಗಳಿಗೆ ಆರಂಭ ಕಾಲದಲ್ಲಿ ರಾಷ್ಟ್ರೀಯತೆಯನ್ನು ಕುರಿತು ತಿಳುವಳಿಕೆ ಕೊಡುವುದು ತುಂಬಾ ಅಗತ್ಯ. ಈ ಕೆಲಸ ಸ್ವದೇಶದಲ್ಲಿ ಮಾತ್ರ ಆಗಬಲ್ಲದು. ವಿದ್ಯಾರ್ಥಿಗಳ ಮನಸ್ಸನ್ನು ಆರೋಗ್ಯಪೂರ್ಣವಾಗಿ ರೂಪಿಸಬಲ್ಲ ಮಾನಸಿಕ ಆಹಾರ ದೊರೆಯಬಲ್ಲದ್ದು ಅವರ ದೇಶದ ಸಂಸ್ಕೃತಿಯಿಂದ ಮಾತ್ರ. ಆ ಸಂಸ್ಕಾರವಿಲ್ಲದೆ ಎಳೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ವಿದೇಶಕ್ಕೆ ಕಳಿಸಿದರೆ ಅವರು ದಾರಿತಪ್ಪುವುದು ನಿಶ್ಚಿತ. ಪ್ರಾರಂಭಿಕ ಶಿಕ್ಷಣವನ್ನು ಒಂದು ಹಂತದವರೆಗೆ ಮುಗಿಸಿದ ಮಕ್ಕಳನ್ನು ವಿದೇಶಕ್ಕೆ ಕಳಿಸಿದಲ್ಲಿ ಪ್ರಯೋಜನವಾದೀತು"** ಎಂಬುದು ಸುಭಾಷರ ಖಚಿತ ಅಭಿಪ್ರಾಯ.

ಸುಭಾಷರ ಸಾಮಾಜಿಕ ಕಳಕಳಿ, ಭಾರತಭಕ್ತಿ, ಶಿಸ್ತುಬದ್ಧ ಜೀವನ ಹಾಗೂ ದೇಶಕ್ಕಾಗಿ ಸ್ವಂತ ಸುಖದ ತ್ಯಾಗ ಮುಂತಾದ ಗುಣಗಳು ಇಂದಿನ ಯುವ ಪೀಳಿಗೆಗೆ ಅನುಕರಣೀಯ ಹಾಗೂ ಆದರ್ಶ ಪ್ರಾಯ.

ತಮ್ಮ ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಬೇಕು ಹಾಗಾದಾಗ ಮಾತ್ರ ಅವರು ಪ್ರತಿಷ್ಠೆಗಳಿಸುವುದು ಎಂಬ ಭ್ರಮೆ ಇರುವ ಇಂದಿನ ಪೋಷಕರು, ಅವರನ್ನು ಮೆಚ್ಚಿಸಹೊರಟಿರುವ ರಾಜಕಾರಣಿಗಳಿಗೆ ಸುಭಾಷರ ವಿದೇಶಿ ಓದಿನ ಬಗೆಗಿನ ಅಭಿಪ್ರಾಯ ದಾರಿ ದೀಪವಾಗಲಿ. ●

## ಚಿತ್ರಸುದ್ದಿ | ಹಿರಿಯ ಕಾರ್ಯಕರ್ತರಾದ ಶ್ರೀ ಜಿ.ಎಸ್ ಕೃಷ್ಣಮೂರ್ತಿ ಅವರೊಂದಿಗೆ















MAG(3)/NPP/26/2018-19 Registered No. RNI 45459/85
Date of Publishing : 17-01-2019

Posted at Bangalore PSO Bangalore -560 026
Date of Posting 20h or 21st of every month

# ಚಿತ್ರಸುದ್ದಿ




ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ವಿಶ್ವಮಾತೆ ಭಾರತಿ' ಪುಸ್ತಕ ಆಧಾರಿತ 'ಸಮರ್ಥ ಭಾರತ' ಪರೀಕ್ಷೆಯು ಬೆಂಗಳೂರು ಬಸವನಗುಡಿ ಬಾಲಕಿಯರ ಸರ್ಕಾರಿ ಶಾಲೆಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರು ಬಸವನಗುಡಿ ರಾಮಕೃಷ್ಣ ಮಠದ ಸ್ವಾಮಿ ರಘುರಾಮಾನಂದಜೀ ಮಹಾರಾಜ್ ಅವರು ವಹಿಸಿದ್ದರು.







ರಾಜಸ್ತಾನದ ಉದಯಪುರದಲ್ಲಿ ನಡೆದ ವಿಚಾರವರ್ಗದಲ್ಲಿ ಕರ್ನಾಟಕದ ಪ್ರತಿನಿಧಿಗಳು

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com